ವಿತ್ತೀಯ ಕಾರ್ಯ ಕಲಾಪಗಳು

೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ೧೯೮೪-೮೫ನೇ ಸಾಲಿಗೆ ಸಂಬಂಧಿಸಿದ ಹೆಚ್ಚುವರಿ ಅನುದಾನಗಳ ಬೇಡಿಕೆಗಳನ್ನು ಸಭೆಯ ಮಂಜೂರಾತಿಗಾಗಿ ಮಂಡಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್ —ಸನ್ಮಾನ್ಯ ಅಧ್ಯಕ್ಷರೆ, ಸಂವಿಧಾನದ ೨೦೫ ಕಲಂ ಪ್ರಕಾರ ಸಭೆಯು ಮಂಜೂರಾತಿಗಾಗಿ ೧೯೮೪-೮೫ನೇ ಸಾಲಿನ ಹೆಚ್ಚುವರಿ ಅನುದಾನಗಳ ಬೇಡಿಕೆಗಳನ್ನು ಈಗಾಗಲೇ ಮಂಡಿಸಿದ್ದೇನೆ. ಇದರಲ್ಲಿ ೨೦ ಕೋಟಿ ೪೩ ಲಕ್ಷದಷ್ಟು ಹಣ ಅಡಕವಾಗಿದೆ. ಇದರಲ್ಲಿ ೧೫ ಕೋಟಿಯಷ್ಟು ಹಣ ಕೇಂದ್ರ ಸರ್ಕಾರದಿಂದ ಬರತಕ್ಕದ್ದು. ನಮ್ಮ ಸರ್ಕಾರದ ಹಣ ವಿರ್ಚಾಗತಕ್ಕದ್ದು ೫.೪೩ ಲಕ್ಷ ಮಾತ್ರ. ಪ್ರತಿಯೊಂದು ಪೂರಕ ಅಂದಾಜುಗಳಿಗೂ ಕೂಡ ವಿವರಣಾತ್ಮಕವಾದ ಟಿಪ್ಪಣಿಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಪ್ಲಾನ್‌ಗೆ ವಿರ್ಚಾಗತಕ್ಕ ಹಣ ಜಾಸ್ತಿ ಇದೆ. ಇದು ಪ್ರತಿವರ್ಷ ಕೂಡ ನಡೆದುಕೊಂಡು ಬಂದಿದೆ. ಆ ಪದ್ಧತಿ ಪ್ರಕಾರ ಅನುಪೂರಕ ಬೇಡಿಕೆಗಳಿಗೆ ಸಭೆಯು ಅಂಗೀಕಾರ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ),—೧೯೮೪-೮೫ನೇ ಸಾಲಿಗೆ ಸಂಬಂಧಪಟ್ಟ ಹೆಚ್ಚುವರಿ ಅನುದಾನಗಳ ಬೇಡಿಕೆಗಳನ್ನು ಸಭೆಯ ಮುಂದೆ ಈಗಾಗಲೇ ಮಂಡಿಸಿದ್ದಾರೆ. ಇವರು ಬಹಳ ಬೇಜವಾಬ್ದಾರಿ ಆಗಿರತಕ್ಕ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ ಎಂದು ಮನವರಿಕೆ ಯಾಗಿದೆ ಅಕೌಂಟೆಂಟ್ ಜನರಲ್ ಅವರು ಈ ಬಗ್ಗೆ ಹತ್ತಾರು ವರದಿಗಳನ್ನು ಕೊಟ್ಟಿದ್ದಾರೆ.

೧೨-೦೦ ಮಧ್ಯಾಹ್ನ

೧೯೮೪-೮೫ನೇ ಇಸವಿಯಲ್ಲಿ ಆಗಿರತಕ್ಕಂತಹ ವಿರ್ಚನ್ನು ೧೯೮೫-೮೬ರಲ್ಲಿ ಮಂಡಿಸುತ್ತಿದ್ದೀರಿ ಅಂದರೆ ಇದನ್ನು ನಾಲ್ಕು ವರ್ಷಗಳಲ್ಲಿ ತರದೇ ಈಗ ತಂದಿದ್ದೀರಿ. ಇದನ್ನು ನೋಡಿದರೆ ಈ ಸರಕಾರಕ್ಕೆ ಜವಾಬ್ದಾರಿ ಇದೆಯೇ ಎಂದು ನಾವು ಸಂಶಯ ಪಡಬೇಕಾಗುತ್ತದೆ. ೧೯೮೫-೮೬ರಲ್ಲಿ ಇದನ್ನು ತಂದಿದ್ದಾರೆ ಈ ಸರಕಾರಕ್ಕೆ ಜವಾಬ್ದಾರಿ ಇದೆ. ಜವಾಬ್ದಾರಿಯುತವಾಗಿ ನಡೆದುಕೊಂಡಿದ್ದಾರೆಂದು ನಮಗೆ ಮನವರಿಕೆಯಾಗುತ್ತಿತ್ತು. ಅಕೌಂಟೆಂಟ್ ಜನರಲ್‌ರವರು ಹತ್ತಾರು ಬಾರಿ ಇದರ ಬಗ್ಗೆ ಅಂದರೆ ಹೆಚ್ಚುವರಿ ವಿರ್ಚಾವರೂ ಆಯಾಯಾ ಸಾಲಿನಲ್ಲಿ ಇಲ್ಲವೇ ಮುಂದಿನ ಸಾಲಿನಲ್ಲಿಯೇ ಸಪ್ಲಿಮೆಂಟರಿ ಬಜೆಟ್ ಎಂದು ಮಾಡಿ ಸಭೆಯ ಮುಂದೆ ತಂದು ಅದಕ್ಕೆ ಅನುಮೋದನೆ ಪಡೆಯಬೇಕು ಎಂದು ಹೇಳಿದಾರೆ. ಇದು ರಾಜ್ಯಾಂಗದಲ್ಲಿ ಕೂಡ ಅಡಕವಾಗಿದೆ ಅದಕ್ಕೆ ತದ್ವಿರುದ್ಧವಾಗಿ ೪ ವರ್ಷಗಳಾದ ಮೇಲೆ ಇಲ್ಲಿ ತಂದು ಈ ಸಭೆ ಅದಕ್ಕೆ ಅನುಮೋದನೆ ಕೊಡಬೇಕೆಂದು ಹೇಳತಕ್ಕಂಥಾದ್ದು ಜವಾಬ್ದಾರಿ ರಹಿತವಾದುದು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಹಣಕಾಸಿನ ಇಲಾಖೆಯಲ್ಲಿ ಕೆಲಸ ಮಾಡತಕ್ಕಂತಹವರಿಗೆ ಜವಾಬ್ದಾರಿಯಿಲ್ಲವೇ ? ಮಂತ್ರಿಗಳು ಅವರ ಮೇಲೆ ಹತೋಟಿಯನ್ನು ಏತಕ್ಕೆ ಇಟ್ಟಿಲ್ಲ ಎಂಬುದನ್ನು ಕಾರಿತ ನಾವು ವಿಚಾರ ಮಾಡಬೇಕಾಗುತ್ತದೆ. ೪ ವರ್ಷಗಳವರೆಗೆ ತಡ ಮಾಡಿ ಈ ಪೂರಕ ಬಜೆಟ್ ಅನ್ನು ಇಡತಕ್ಕಂಥಾದ್ದು ಸರಿಯಲ್ಲ ಇದು ಆಡಳಿತದ ಒಂದು ಲೋಪ ವೆಂದು ತಿಳಿದುಕೊಂಡರೆ, ಅಂತಹ ಜವಾಬ್ದಾರಿಯುತವಾದ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ೪ ವರ್ಷಗಳ ನಂತರ ಇಂತಹ ಬೇಡಿಕೆಯನ್ನು ಇಟ್ಟಿರುವುದನ್ನು ನೋಡಿದರೆ ಈ ಸರಕಾರದ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಅಡಚಣೆದಲ್ಲಿ ಅಧಿಕಾರಿಗಳು ಯಾರಿದ್ದಾರೆ ಅವರ ಮೇಲೆ ಸರಕಾರ ಸಂಪೂರ್ಣವಾದ ಹತೋಟಿಯನ್ನು ಕಳೆದುಕೊಂಡಿದೆ ಎಂದು ನನಗನ್ನಿಸುತ್ತದೆ. ಜನತಾ ಪಾರ್ಟಿ ಅಧಿಕಾರಕ್ಕೆ ಬಂದಾಗಿನಿಂದ ಹಿಡಿದು ಇವತ್ತಿನವರೆಗೆ ಆರ್ಥಿಕ ವ್ಯವಸ್ಥೆ ಕೈ ಬಿಟ್ಟು ಹೋಗಿದೆ ಅವರ ಮೇಲೆ ಇವರಿಗೆ ಹತೋಟಿಯಿಲ್ಲ

ಆಯವ್ಯಯ ಪತ್ರವನ್ನು ತಂದು ಇಲ್ಲಿ ಮಂಡಿಸಿ ಅದಕ್ಕೆ ಅನುಮೋದನೆಯನ್ನು ಪಡೆದು ನಂತರ ಅದರಲ್ಲಿ ಎಷ್ಟು ಖರ್ಚಾಯಿತು, ಎಷ್ಟು ಖರ್ಚಾಗಲಿಲ್ಲಿ ಎಷ್ಟು ಜಾಸ್ತಿ ಖರ್ಚಾಯಿತು ಅನ್ನುವ ತಕ್ಕಂಥಾದ್ದನ್ನು ಎಷ್ಟು ತುರ್ತಾಗಿ ಈ ಸದನಕ್ಕೆ ಮನವರಿಕೆ ಮಾಡಬೇಕಾಗಿತ್ತೋ ಅಷ್ಟು ತುರ್ತಾಗಿ ಮನವರಿಕೆ ಮಾಡಬೇಕಾಗಿತ್ತು ಆದರೆ ಅದನ್ನು ಇವರು ಮಾಡಲಿಲ್ಲ. ಆದುದರಿಂದಾಗಿ ನಾವು ಇಂತಹ ಪೂರಕ ಬೇಡಿಕೆಗಳನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅಧಿಕಾರಿಗಳ ಬೇಜವಾಬ್ದಾರಿ ಬಗ್ಗೆ ನಿಮ್ಮ ಬೇಜವಾಬ್ದಾರಿ ಬಗ್ಗೆ ಸಮಂಜಸವಾಗಿರತಕ್ಕಂತಹ ಉತ್ತರವನ್ನು ಕೊಡದೆ ಹೋದರೆ ನಾವು ಪೂರಕ ಬೇಡಿಕೆ ಅನುಮೋದನೆ ಕೊಡುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

†ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ೬೪೯೬೯೯೭ ರೂಪಾಯಿಗಳ ಪೂರಕ ಬೇಡಿಕೆಗೆ ಇವರು ಅನುಮೋದನೆಯನ್ನು ಕೇಳಿದ್ದಾರೆ ಇಷ್ಟೊಂದು ಫೈನಾನ್ಸಿಯಲ್ ಇನ್‌ಡಿಸಿಪ್ಲಿನ್ ಇರುವುದಕ್ಕೆ ಕಾರಣವೇನು ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಮೈನರ್ ಇರಿಗೇಷನ್‌ಗೆ ೨ ಕೋಟಿ ೬೨ ಲಕ್ಷ, ಪಬ್ಲಿಕ್ ವರ್ಕ್ಸ್‌ಗೆ ೨೧ ಕೋಟಿ ಎಂದು ಇದೆ. ಲೆಟರ್ ಆಫ್ ಕ್ರೆಡಿಟ್‌ಗೆ ಅವಕಾಶ ಇದ್ದರೂ ಇಷ್ಟೊಂದು ಫೈನಾನ್ಸಿಯಲ್ ಇನ್‌ಡಿಸಿಪ್ಲಿನ್‌ಗೆ ಅವಕಾಶ ಕೊಟ್ಟಿದ್ದಾರೆಂದು ಹೇಳಿದರೆ ಬಹಳ ಶೋಚನೀಯಂವಾದ ವಿಚಾರ. ಇದನ್ನು ಒಪ್ಪುವುದು ಬಹಳ ಕಷ್ಟ. ಇನ್ನೊಂದು ವಿಷಯವನ್ನು ತಮ್ಮ ಮುಂಬಾಂತರ ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ತಿಳಿಸಬಯಸುತ್ತೇನೆ. ೮ ದಿವಸದ ಹಿಂದೆ ಸರಕಾರದಿಂದ ಒಂದು ಮೆಸೇಜ್ ಬಂದಿದೆ ಅದರಲ್ಲಿ ೧೦೦ ರೂಪಾಯಿಯ ಬಿಲ್ಲನ್ನು ಟ್ರೆಜರಿಯಿಂದ ಆನರ್ ಮಾಡಬಾರದು, ಆದರೆ ೩೫ ಐಟಂಗಳಿಗೆ ಮಾತ್ರ ರಿಲೀಸ್ ಮಾಡಬಹುದು ಎಂದು ಆರ್ಡರ್ ಮಾಡಿದ್ದಾರೆ. ಆದಾದ ಮೇಲೆ ನಿನ್ನೆ ಯಾವುದಕ್ಕೂ ಖರ್ಚು ಮಾಡಬೇಡಿ ಎಂದು ಟ್ರೆಜರಿಗೆ ಆರ್ಡರ್ ಬಂದಿದೆ ಒಂದು ಕಡೆ ನ್ಯಾಯವಾಗಿ ಯಾವುದಕ್ಕೆ ಖರ್ಚು ಮಾಡಬೇಕೋ ಅದಕ್ಕೆ ಖರ್ಚು ಮಾಡುವುದಿಲ್ಲ. ಅಂದರೆ ಜನತಾ ಮನೆಗಳ ಖರ್ಚಿಗೆ ೨೦೦ ರೂಪಾಯಿ ಬಿಲ್ ಮಾಡುವುದಕ್ಕೆ ಪರ್ಮಿಷನ್ ಇಲ್ಲ. ಇನ್ನೊಂದೂ ಕಡೆ ಪೂರಕ ಬಜೆಟ್ ಅನ್ನು ತಂದು ಇಲ್ಲಿ ಅನುಮೋದನೆಗೆ ಇಡುತ್ತೀರಿ ಅದಕ್ಕೆ ಎ.ಜಿ.ಯವರು ಆಬ್ಜೆಕ್ಷನ್ ಹಾಕಿದರೂ ನಾವು ಮಾಡುವುದನ್ನು ಮಾಡುತ್ತೇವೆಂದು ಹೇಳುತ್ತೀರಿ. ಇದು ಸರಿಯಾದುದಲ್ಲ ನಾನು ಇನ್ನೊಂದು ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ ಫೈನಾನ್ಸಿನಲ್ಲಿ ಡಿಸಿಪ್ಲಿನ್ ಇರಬೇಕು ಈಗ ಏನಾಗಿದೆ ಎಂದರೆ ಟ್ರೆಜರಿಯಲ್ಲಿ ಯಾವ ಬಿಲ್ಲನ್ನೂ ಪಾಸ್ ಮಾಡಬಾರದೆಂದು ಆಗಿದೆ, ಇದನ್ನು ದಯವಿಟ್ಟು ಪರಿಶೀಲನೆ ಮಾಡಬೇಕು. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಈ ಒಂದು ಅನ್ಯಾಯಕ್ಕೆ ಇಳಿಯಬಾರದು. ನ್ಯಾಯವಾಗಿ ಯಾವುದಕ್ಕೆ ಖರ್ಚು ಮಾಡಬೇಕೋ ಅದಕ್ಕೆ ಅನುಮತಿಯನ್ನು ಕೊಡಬೇಕು, ಇದನ್ನು ಸರಿ ಮಾಡಬೇಕು ಎಂದೆಂ ಕೇಳಿಕೊಳ್ಳುತ್ತೇನೆ. ಬ್ಲಾಂಕೆಟ್ ಬ್ಯಾನ್ ಹಾಕಿದ್ದಾರೆ, ಇದು ಹೋಗಬೇಕೆಂದು ಹೇಳುತ್ತೇನೆ.

†ಶ್ರೀ ಕೆ ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಸಭಾಧ್ಯಕ್ಷರೇ, ಈ ಹೆಚ್ಚುವರಿ ಅನುದಾನಗಳು ೧೯೮೪–೮೫ರಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಖರ್ಚು ಮಾಡಿರತಕ್ಕಂಥ ಹಣಕ್ಕೆ ಸಂಬಂಧಪಟ್ಟಿರುವುದರಿಂದ ಇದಕ್ಕೆ ಮಂಜೂರಾತಿಯನ್ನು ಕೊಡದೆ ಏನೂ ಗತ್ಯಂತರವಿಲ್ಲ. ನಾವು ಎಷ್ಟೇ ಪ್ರಬಲವಾಗಿ ವಿರೋಧಿಸಿದರೂ ಕೂಡಾ ಈಗಾಗಲೇ ಖರ್ಚು ಮಾಡಿ ಮುಗಿದಿರತಕ್ಕಂಥ ಹಣ ಇದು. ಆದರೆ ಇದನ್ನು ತರುವುದಕ್ಕಿಂತ ಮುಂಚಿತವಾಗಿ ಈ ಪ್ರಾರಂಭಿಕ ಜ್ಞಾಪನಾಪತ್ರದಲ್ಲಿ ಹೇಳಿದ್ದಾರೆ, ಏತಕ್ಕೆ ತರಬೇಕಾಯಿತು ಎಂದರೆ ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಇದನ್ನು ಪರಿಶೀಲನೆ ಮಾಡಿ ಇದನ್ನು ನೀವು ಹಾಗೆ ತೂರಿಸಿಕೊಂಡು ಹೋಗುವುದಕ್ಕಾಗುವುದಿಲ್ಲಾ, ಇದರ ಬಗ್ಗೆ ನೀವು ವಿಧಾನ ಮಂಡಲದ ಒಪ್ಪಿಗೆಯನ್ನು ಪಡೆಯಬೇಕು ಎಂದು ಹೇಳಿ ಶಿಫಾರಸ್ಸನ್ನು ಮಾಡಿದ ಮೇಲೆ ಇವರಿಗೆ ಜ್ಞಾನೋದಯವಾಗಿ ಇದನ್ನು ತಂದಿದ್ದಾರೆ. ಆ ವಿಷಯದ ಬಗ್ಗೆ ನಾನು ಸಭೆಯ ಗಮನವನ್ನು ಸೆಳೆಯುವುದಕ್ಕೆ ಬಯಸುವುದು ಏನೆಂದರೆ ಬೇರೆ ಹೆಚ್ಚುವರಿ ಖರ್ಚು ಮಾಡಿರುವುದಷ್ಟೇ ಅಲ್ಲ. ಹೆಚ್ಚುವರಿ ಖರ್ಚು ಮಾಡಿದಂಥ ಸಂದರ್ಭದಲ್ಲಿ ಸಕಾರಣವಾಗಿ ಅದನ್ನು ಖರ್ಚು ಮಾಡಿದ್ದಾರೆಯೇ ಎಂದು ಹೇಳಿ ಸಾಬೀತುಪಡಿಸುವುದು ಅಲ್ಲದೆ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹಾಗೆ ಖರ್ಚು ಮಾಡುವಂಥದ್ದಕ್ಕೆ ವಿಧಾನಸಭೆಯ ಒಪ್ಪಿಗೆಯನ್ನು ಪಡೆಯಬೇಕು ಎನ್ನುವಂಥ ಪರಿಜ್ಞಾನ ಕೂಡಾ ಈ ಇಲಾಖೆಗಳಲ್ಲಿ ಇಲ್ಲದೇ ಹೋದರೆ ಇನ್ನು ಯಾವ ಆರ್ಥಿಕ ಶಿಸ್ತನ್ನು ಈ ಇಲಾಖೆಗಳು ರೂಢಿಸಿಕೊಳ್ಳುವುದಕ್ಕೆ ಸಾಧ್ಯ ಇದೆ. ಇದನ್ನ ದಯವಿಟ್ಟು ಸರ್ಕಾರದವರು ತೀವ್ರ ರೀತಿಯಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು. ನಿಜ ಎಂದರೆ ಇವರು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಉತ್ತರ ಕೊಡುವುದಕ್ಕೆ ಸಾಧ್ಯವಾಗದೇ ಇದ್ದಂಥ ಪರಿಸ್ಥಿತಿಯಲ್ಲಿ ಹೋಗಿ ಆ ನಂತರ ಅವರ ಹತ್ತಿರ ಸಲಹೆಯನ್ನು ಕೇಳಿಕೊಂಡು ಇದನ್ನು ನಾವು ವಿಧಾನಸಭೆಯ ಮುಂದೆ ತೆಗೆದುಕೊಂಡು ಹೋಗಿ ಇದನ್ನು ನಾವು ಮಂಜೂರಾತಿಯನ್ನು ಮಾಡಿಸಿಕೊಳ್ಳುತ್ತೇವೆ ಎಂದು ಹೇಳುವಂಥ ಸ್ಥಿತಿಯಲ್ಲಿ ನಿಮ್ಮ ಇಲಾಖೆಗಳು ಇದ್ದರೆ ಅವರಿಗೆ ಆರ್ಥಿಕ ಶಿಸ್ತಿನ ಪಾಠವನ್ನು ಎಲ್ಲಿಂದ ಪ್ರಾರಂಭ ಮಾಡುತ್ತೀರಿ ? ಅವರಿಗೆ ಆ ಆ ಕ ಯಿಂದಲೇ ಪ್ರಾರಂಭ ಮಾಡಬೇಕಾಗುತ್ತದೆ. ಇದು ಒಂದೇ ಅಲ್ಲ. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ ನಾವು ನೋಡಿದಂತೆ ಹಲವಾರು ಇಲಾಖೆಗಳು ಆರ್ಥಿಕ ಆಶಿಸ್ತಿನಿಂದ ಪೀಡಿಸಲ್ಪಡುತ್ತಿದ್ದಾವೆ. ಒಂದೇ ರೀತಿಯಾದಂಥ ಅಶಿಸ್ತಿನಿಂದ ಅಲ್ಲ. ಕೆಲವು ಇಲಾಖೆಗಳು ಇದ್ದಾವೆ, ಬೋರ್ಡ್ಸ್ ಕಾರ್ಪೊರೇಷನ್ಸ್ ಇದರಲ್ಲಿ ಬರುತ್ತವೆ, ಅಲ್ಲಿ ಏನು ಆಗಿದೆ ಎಂದರೆ ಬ್ಯಾಂಕ್‌ಗಳಲ್ಲಿ ಡಿಪಾಸಿಟ್ ಹಾಕಿ ಇಟ್ಟುಕೊಂಡಿದ್ದಾರೆ. ಆದು ಸರ್ಕಾರದ ಹಣ, ಸರ್ಕಾರದಲ್ಲಿ ಸಂಬಳ ಕೊಡುವುದಕ್ಕೆ ದುಡ್ಡಿಲ್ಲದೇ ಒದ್ದಾಡುತ್ತಿದ್ದಾರೆ. ಇವರುಗಳು ಬ್ಯಾಂಕ್‌ಗಳಲ್ಲಿ ಡಿಪಾಸಿಟ್ ಇಟ್ಟುಕೊಂಡು ಮ್ಯಾನೇಜರ್ ಜೊತೆಯಲ್ಲಿ ಸ್ನೇಹವಾಗಿದ್ದಾರೆ. ಇವರುಗಳಿಗೆ ಆರ್ಥಿಕ ಶಿಸ್ತನ್ನು ತರುವುದಕ್ಕೆ ಸಾಧ್ಯವಿದೆಯೇ ? ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಶಿಫಾರಸ್ಸು ಹಲವಾರು ಇವೆ. ಎಲ್ಲಾ ಸಮಿತಿಯ ರಿಪೋರ್ಟ್‌ಗಳು ತಮ್ಮ ಒಂದು ಗ್ರಂಥಾಲಯದಲ್ಲಿ ಕಪಾಟುಗಳಲ್ಲಿ ಶೃಂಗಾರವಾಗಿ ಅಲಂಕಾರವಾಗಿ ಜೋಡಿಸಲ್ಪಟ್ಟಿವೆ. ಅದನ್ನು ನೋಡತಕ್ಕಂಥವರು ಯಾರೂ ಇಲ್ಲ, ಕಾರ್ಯಗತ ಮಾಡತಕ್ಕಂಥದ್ದು ಆಗುವುದಿಲ್ಲ.

ಅಧ್ಯಕ್ಷರು.—ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದಾರೆ.

ಶ್ರೀ ಕೆ ಹೆಚ್. ಶ್ರೀನಿವಾಸ್.—ಕೋಲ್ಡ್ ಸ್ಟೋರೇಜೋ, ವಾರ್ಮ್ ಸ್ಟೋರೇಜೋ ಅಂತೂ ಅದು ಒಟ್ಟಿನಲ್ಲಿ ಕಪಾಟಿನಲ್ಲಿ ಶೃಂಗಾರವಾಗಿ ಜೋಡಿಸಲ್ಪಟ್ಟಿವೆ. ಇವರುಗಳು ಸರ್ಕಾರದಿಂದ ಯಾವುದೇ ಪಾಠವನ್ನು ಕಲಿಯುವುದಕ್ಕೆ ತಯಾರು ಇಲ್ಲ. ಈ ರೀತಿ ಆದರೆ ಡಿಸಿಪ್ಲಿನ್ ಎಲ್ಲಿಂದ ಬರುತ್ತದೆ ? ಮಾತು ಎತ್ತಿದರೆ ಆರ್ಥಿಕ ಶಿಸ್ತು, ಡಿಸಿಪ್ಲಿನ್ ತರುತ್ತೇವೆ, ಪುತ್ತೊಂದು ತರುತ್ತೇವೆ ಎಂದು ಬಾಯಿಲ್ಲಿ ಹೇಳಿದರೆ ಹೇಗೆ ಡಿಸಿಪ್ಲಿನ್ ಬರುತ್ತದೆ ? ಬರೀ ಭಾಷಣ ಮಾಡುವುದರಿಂದ ಡಿಸಿಪ್ಲಿನ್ ಬರುತ್ತದೆಯೇ? ಎಲ್ಲಿ ಇನ್‌ಡಿಸಿಪ್ಲಿನ್ ಪ್ರಾರಂಭವಾಗುತ್ತದೆ. ಆ ಪಾಯಿಂಟನ್ನು ಗುರುತಿಸಿಕೊಂಡು ಆ ಪಾಯಿಂಟ್‌ನಲ್ಲೇ ಇದನ್ನು ಬಿಗಿ ಮಾಡುತ್ತಾ ಬಂದರೆ ಶಿಸ್ತು ಬರುವುದಕ್ಕೆ ಸಾಧ್ಯ ಇದೆಯೇ ಹೊರತು ಹತ್ತು ಹದಿನೈದು ವರ್ಷಗಳಿಂದ ಹೇಗೆ ಬೇಕೋ ಹಾಗೆ ನಡೆಸಿಕೊಂಡು ಬಂದು ಕೊನೆಗೆ ಶಿಸ್ತು ಶಿಸ್ತು ಎಂದು ಭಾಷಣ ಮಾಡಿದರೆ ಆಗುವುದಿಲ್ಲ ಎಲ್ಲಿಯಾದರೂ ಒಂದುಕಡೆ ನಿಷ್ಪಾರವಾಗಿ ಈ ಕೆಲಸವನ್ನು ಪ್ರಾರಂಭಿಸಬೇಕಾದುದು ಅತ್ಯಗತ್ಯ ಇದೆ. ಆ ರೀತಿಯಲ್ಲಿ ಒಂದು ಸಂದರ್ಭ ಇರುತ್ತದೆ. ಹಣ ಲ್ಯಾಪ್ಸ್ ಆಗಬಾರದು ಎಂದು ಆಂಕ್ಸೈಟಿ ಇದೆ, ಇದನ್ನು ಉಪಯೋಗ ಮಾಡಿಕೊಳ್ಳಬೇಕು ಎಂಬ ಆತುರದಲ್ಲಿ ಕೆಲವು ಜನ ಡ್ರಾ ಮಾಡಿಬಿಡುತ್ತಾರೆ ಎಂದು ಇಟ್ಟುಕೊಳ್ಳಿ, ಅವರಿಗೂ ಕೂಡಾ ನಾವು ಒಂದು ಶಿಫಾರಸ್ಸನ್ನು ಮಾಡಿದ್ದೇವೆ.

ಆದನ್ನು ಉಪಯೋಗ ಮಾಡಿಕೊಳ್ಳುವಂತಹ ಆತುರದಲ್ಲಿ ಕೆಲವು ಜನ ಡ್ರಾ ಮಾಡಿ ಬಿಟ್ಟರು ಅದಕ್ಕೂ ಕೂಡ ನಾವು ಒಂದು ಶಿಫಾರಸ್ಸು ಮಾಡಿದ್ದೇವೆ. ಅದನ್ನು ಅಕೌಂಟೆಂಟ್ ಜನರಲ್‌ರವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಅದಕ್ಕೆ ಸಾಧ್ಯವಿದ್ದರೆ ವಿಶಿಷ್ಟ ನಿಧಿಯನ್ನು ಸರ್ಕಾರದಲ್ಲಿ ರೂಪಿಸಿ, ಆ ಹಣ ಲ್ಯಾಪ್ಸ್ ಆಗಬಾರದು ಸರ್ಕಾರದ ಟ್ರೆಷರಿಯಲ್ಲಿ ಅವೈಲೆಬಲ್ ಇರಬೇಕು ಎಂಬ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯತೆ ಇದೆ. ಇದರ ಬಗ್ಗೆ ಸರ್ಕಾರ ಶ್ರಮ ಹಾಗೂ ಶ್ರದ್ಧೆಯನ್ನು ವಹಿಸಿ ಯೋಚನೆ ಮಾಡಬೇಕಾದ ಅಗತ್ಯ ಇದೆ ಆದೇ ರೀತಿಯಲ್ಲಿ ಈ ಇಲಾಖೆಗಳಿಗೆ ಏನು ಅನಿರೀಕ್ಷಿತ ವೆಚ್ಚ ಬಂತು ? ಅಂದರೆ ಕೆಲವು ಸಂದರ್ಭದಲ್ಲಿ ನಿಜವಾಗಿ ಬೆಚ್ಚುವರಿ ಅನುದಾನವನ್ನು ತಡೆಯುವುದಕ್ಕಾಗುವುದಿಲ್ಲ. ಯಾವುದೇ ಒಂದು ಗ್ರಾಂಟ್ ಅನ್ನು ಸೆಂಟ್ರಲ್ ಗವರ್ನಮೆಂಟ್ ಇಲೆವೆಂತ್ ಪವರ್‌ನಲ್ಲಿ ರಿಲೀಸ್ ಮಾಡಿದಾಗ ಅದಕ್ಕೆ ಪ್ಯಾಚಿಂಗ್ ಗ್ರಾಂಟ್ ಅನ್ನು ನೀವು ರಿಲೀಸ್ ಮಾಡದೇ ಹೋದರೆ ಆ ಗ್ರಾಂಟ್ ಲ್ಯಾಪ್ಸ್ ಆಗುತ್ತದೆ. ಅಂತಹ ಸಂದರ್ಭಗಳು ಕೆಲವು ಮಾತ್ರ ಇದೆ. ನೀವು ಯಾವುದೇ ಲಕ್ಷ ಇಟ್ಟುಕೊಳ್ಳದೇ ಮನಸೋ ಇಚ್ಛೆ ಸಂದರ್ಭ ಇರಲಿ, ಅಥವಾ ಇಲ್ಲದಿರಲಿ ವಿವೇಚನೆಯಿಂದ ಇಷ್ಟು ಹಣ

ನಿರೀಕ್ಷಣೆ ಮಾಡುವುದಕ್ಕೆ ಸಾಧ್ಯ ಇದ್ದರೂ ಸಹ ಏಕೆ ಹೇಳಬೇಕು, ಹಾಗೆ ಬಂದರೆ ಹೀಗೆ ಮಾಡೋಣ, ಹೀಗೆ ಬಂದರೆ ಹಾಗೆ ಮಾಡೋಣ ಎಂದು ಇದರಿಂದ ಬಂದು ಆರ್ಥಿಕವಾದ ಅಶಿಸ್ತಿಗೆ ಕಾರಣರಾಗಿದ್ದಾರೆ, ಯಾವುದೇ ಇಲಾಖೆಗಳು ಅಶಿಸ್ತನ್ನು ಶಿಸ್ತು ಎನ್ನುವ ಭಾವನೆಯಿಂದ ಕೆಲಸ ಮಾಡುತ್ತಿದ್ದಾರೆ, ಅದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ. ಇದರ ಬಗ್ಗೆ ಈಗಲೇ ಸರ್ಕಾರದ ಆಲೋಚನೆ ಏನು ಎಂದು ತಿಳಿದರೆ ಒಳ್ಳೆಯದು. ಇದರ ಬಗ್ಗೆ ಸ್ವಲ್ಪ ಗಮನ ಹರಿಸಿದ್ದೇವೆ ಎನ್ನುತಕ್ಕ ವಿಚಾರವನ್ನೂ ಮಂತ್ರಿಗಳು ಹೇಳಿದರೆ ನಾವು ಸ್ವಲ್ಪ ನೆಮ್ಮದಿಯಿಂದ ಏನೋ ಹೇಳಬಹುದು. ಸುಮ್ಮನೇ ಇದು ರೊಟೀನ್ ಆಗತಕ್ಕದು ಎಂದು ಹೇಳಿದ್ದಾರೆ ಅಧಿಕಾರಿಗಳು ಏನು ತಿಳಿದುಕೊಳ್ಳುತ್ತಾರೆ? ನಾವು ಏನು ಬೇಕಾದರೂ ಮಾಡಬಹುದು ಎಂದೂ ಅವರು ತಿಳಿದುಕೊಳ್ಳುತ್ತಾರೆ. ವಿಧಾನಸಭೆಯಲ್ಲಿ ಬಂದಾಗ ಒಂದಿಷ್ಟು ಜನ 'ಏ' ಅನ್ನುತ್ತಾರೆ, ಒಂದಿಷ್ಟು ಜನ 'ನೋ' ಎನ್ನುತ್ತಾರೆ. ಸರ್ಕಾರ ಇದ್ದ ಕಡೆ ಹೇಗೊ ಆಗುತ್ತದೆ ಎನ್ನುವ ಭಾವನೆ ಬರುವುದಾದರೆ ನೀವು ಎಲ್ಲಿಂದ ಆಶಿಸ್ತನ್ನು ನಿವಾರಿಸುವುದಕ್ಕೆ ಸಾಧ್ಯ ಇದೆ ಯಾವ ಅಧಿಕಾರಿ ತಮ್ಮ ನಿರೀಕ್ಷೆಯಲ್ಲಿ ವಿಷಯ ಜ್ಞಾನ ಇದ್ದರೂ ಕೂಡ ಅದನ್ನು ಸರಿಯಾದ ರೀತಿಯಲ್ಲಿ ನಿರೀಕ್ಷೆ ಮಾಡದೇ ಬೇರೆ ರೀತಿಯಲ್ಲಿ ತಾತ್ಸಾರವಾಗಿ ಕಂಡು ಇಂತಹ ಹೆಚ್ಚುವರಿ ಖರ್ಚುಗಳಿಗೆ ಕಾರಣಕರ್ತರಾಗುತ್ತಾರೆ ಅಂಥವರ ಮೇಲೆ ಒಂದಲ್ಲ ಒಂದು ರೀತಿಯ ಕ್ರಮ ಜರುಗಿಸಲೇ ಬೇಕು. ಹಾಗೆ ಕ್ರಮ ಜರುಗುತ್ತದೆ ಎನ್ನುವುದಿದ್ದರೆ ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸು ಬರುವುದಕ್ಕೆ ಮುಂಚೆ ಯಾಕೆ ತಂದಿರಲಿಲ್ಲ ? ಇದಕ್ಕೆ ಯಾರು ಜವಾಬ್ದಾರರು ? ಇದರ ಬಗ್ಗೆ ವಿಮರ್ಷೆ ಮಾಡಬೇಕು ವಿಮರ್ಷೆ ಮಾಡುತ್ತೇವೆ ಎನ್ನತಕ್ಕ ಒಂದು ಭರವಸೆಯನ್ನು ನಮಗೆ ಕೊಟ್ಟರೆ ಇದೆಲ್ಲಾ ಕೆಲಸ ಮಾಡಿದ್ದಕ್ಕೆ ನಮಗೆ ಸಾರ್ಥಕತೆ ಆದೀತು. ಆರ್ಥಿಕ ಅಶಿಸ್ತು ಇದೇ ರೀತಿ ಬೆಳೆಯುತ್ತಾ ಹೋದರೆ ಸರ್ಕಾರದಲ್ಲಿ ಹಣ ಇದ್ದರೂ ಕೂಡ ನಿಜವಾದ ಕೆಲಸ ಕಾರ್ಯಗಳಿಗೆ ಹಣ ಸಿಗದೇ ಎಲ್ಲಿ ಬೇಡವೋ ಅಲ್ಲಿ ಹಣ ಸಿಗುವುದು ಹಾಗೆಯೇ ಸರ್ಕಾರದ ಹಣ ಬ್ಯಾಂಕ್‌ಗಳಲ್ಲಿ ಕೊಳೆಯುತ್ತಾ ಬಿದ್ದು ಸರ್ಕಾರದ ಯೋಜನೆಗಳೆಲ್ಲಾ ಅಸ್ತವ್ಯಸ್ತವಾಗತಕ್ಕ ಒಂದು ಪರಿಸ್ಥಿತಿಗೆ ಕಾರಣವಾಗುವುದರಿಂದ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದ ಚಿಂತನೆ ಏನು ಸರ್ಕಾರದ ಕ್ರಮ ಏನು ಎಂಬುದನ್ನು ಮಂತ್ರಿಗಳು ತಮ್ಮ ಉತ್ತರದಲ್ಲಿ ಸ್ಪಷ್ಟಪಡಿಸಬೇಕು ಎಂದು ಮತ್ತೊಮ್ಮೆ ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಸಭಾಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಹಳೆಯ ಲೆಕ್ಕವನ್ನು ನಮ್ಮ ಗಮನಕ್ಕೆ ತಂದ ಮಾನ್ಯ ಕಾನೂನು ಸಚಿವರು ತಂದಿದ್ದಾರೆ. ಇದರ ಬಗ್ಗೆ ಒಂದೇ ಒಂದು ಮಾತು ಹೇಳುವುದಾದರೆ, ಇದು ಪೋಸ್ಟ್ ಮಾರ್ಟಮ್ ಪೋಸ್ಟ್ ಮಾರ್ಟಮ್ ಅನ್ನು ಮಾಡುವುದರಿಂದ ಯಾವುದೇ ತರಹದ ಲಾಭ ಸರ್ಕಾರಕ್ಕೆ ಆಗಲಿ ಅಥವಾ ಸದನಕ್ಕೆ ಆಗಲಿ ಲಭ್ಯವಾಗುವುದಿಲ್ಲ. ಇಂತಹ ಪೋಸ್ಟ್ ಮಾರ್ಟಮ್ ಪ್ರಹಸನವನ್ನು ಬಿಡಬೇಕು ಎಂದು ನಾವು ಹೇಳುವುದಕ್ಕಿಂತ ಹೆಚ್ಚು ಲಾ ಮಿನಿಸ್ಟರ್ ಆಗಿ ತರುಣರಾಗಿರುವ ಅವರು ವಿಷದವಾಗಿ ಸರ್ಕಾರಕ್ಕೆ ಬುದ್ಧಿವಾದ ಹೇಳಿದರೆ ಚೆನ್ನಾಗಿರುತ್ತದೆ. ಯಾವುದೇ ಉತ್ತಮವಾದ ಕೆಲಸಗಳನ್ನು ಮಾಡಬೇಕಾದರೆ ಸರ್ಕಾರದ ಅಧಿಕಾರಿಗಳಂ ಹಣ ಇಲ್ಲ ಎನ್ನುತ್ತಾರೆ ಇಂತಹ ಅನಾವಶ್ಯಕ ವೆಚ್ಚಗಳನ್ನು ನೋಡಿದರೆ ನಮಗೆ ಬಹಳ ನೋವುಂಟಾಗುತ್ತದೆ. ಮಾರ್ಚ್ ೩೧ನೇ ತಾರೀಖು ಬಂದರೆ ಇಡೀ ವರ್ಷದ ಖರ್ಚು ಹಾಕಿ ಇಟ್ಟು ಬಿಡುತ್ತಾರೆ. ತಿರುಗಿ ಮಾರ್ಚ್ ೩೧ ಬಂದರೆ ಕೆಲಸ ಆಗುವುದಿಲ್ಲ. ಈಗ ಮಾನ್ಯ ಲಾ ಮಿನಿಸ್ಟರ್ ಹೇಳಬಹುದು, ನೀವು ಹೀಗೆ ನೇರವಾಗಿ ಟೀಕೆ ಮಾಡಿದರೆ ಹೇಗೆ ಎಂದು ನಾನು ಉದಾಹರಣೆ ಕೊಟ್ಟು ಹೇಳುತ್ತಿದ್ದೇನೆ. ಹೋದ ವರ್ಷ ಮಾರ್ಚ್ ೨೭ನೇ ತಾರೀಖಿನ ದಿವಸ ನಮ್ಮಲ್ಲಿ ಟೆಕ್ಸ್‌ಟೈಲ್ಸ್ ಮಿಲ್‌ಗಳಿಗಾಗಿ ನ್ಯಾಷನಲ್ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ಹಣ ಮಂಜೂರು ಮಾಡಿ ಇವರಿಗೆ ತಿಳಿಸಿದರು. ಆದರೆ ಇವರು ಮಾರ್ಚ್ ೩೧ರ ಒಳಗೆ ಇದಕ್ಕೆ ವ್ಯವಸ್ಥೆ ಮಾಡಬೇಕಾಗಿತ್ತು ಅದೇ ರೀತಿ ಆಯಿಲ್ ಮಿಲ್ಸ್‌ಗಳವರಿಗೆ ತಿಳಿಸಿದರು. ಹಣ ಖರ್ಚು ಆಯಿತು. ಪಿ.ಎಲ್.ಡಿ. ಆಕೌಂಟ್ ಎಂದು ಇಟ್ಟುಕೊಂಡರು ಆದರೆ ಈತನಕ ಹಣವನ್ನು ಮಾತ್ರ ರಿಲೀಸ್ ಆಗಿಲ್ಲ ಇದನ್ನು ನಾವಿಕೆ ಗೇಡಿತನದ ಕ್ರಮ ಅನ್ನಬೇಕೇ ಅಥವಾ ಇನ್ನು ಏನು ಅನ್ನಬೇಕು ಎನ್ನುವುದನ್ನು ಮಾನ್ಯ ಅಧ್ಯಕ್ಷರಿಗೆ ಬಿಟ್ಟುಬಿಡುತ್ತೇನೆ. ದೇಶದ ಎಲ್ಲಾ ಕಡೆಗೂ ಜನರು ತಮ್ಮ ತಮ್ಮ ರಾಜ್ಯಗಳಿಗೆ ಹೊಸದಾಗಿ ಟೆಕ್ಸ್‌ಟೈಲ್ಸ್ ಮಿಲ್‌ಗಳಂ ಬೇಕೆಂದು ವಾದ ವಿವಾದ ಮಾಡುತ್ತಿರುವ ಸಮಯದಲ್ಲಿ ನಮ್ಮ ರಾಜ್ಯದಲ್ಲಿ ಇರುವಂತಹ ೭ ಮಿಲ್‌ಗಳ ಪೈಕಿ ೪ ಮಿಲ್‌ಗಳು ಬಂದ್ ಆಗಿವೆ. ನಾವು ಬೇರೆ ರಾಜ್ಯಗಳಿಗೆ ಹೋದಾಗ ಅಲ್ಲಿನವರು ಏನಾದರೂ

ನಿಮ್ಮಲ್ಲಿ ಏತಕ್ಕೆ ೪ ಬಿಲ್‌ಗಳು ಬಂದ್ ಆಗಿವೆ ಎಂದು ಕೇಳಿದರೆ ನಾವು ಅವರಿಗೆ ಈ ಸರ್ಕಾರದ ವಿರುದ್ಧ ಏನೂ ಹೇಳಂವಂತಿಲ್ಲ. ಅಂತಹ ಒಂದು ಪರಿಸ್ಥಿತಿ ಬಂದಿದೆ ಇದು ನಮ್ಮ ಹಣೇಬರಹ. ಮಾರ್ಜಿನ್ ವಂನಿ ಇದೂವರೆಗೆ ಕೊಟ್ಟಿಲ್ಲ ಆರ್ಥಿಕ ಇಲಾಖೆಯಲ್ಲಿ ಎಂತಹ ಭೂಪರು ಇದ್ದಾರೆಂದರೆ, ಯಾರು ನಮ್ಮ ರಾಜ್ಯದ ಆರ್ಥಿಕ ಅಶಿಸ್ತಿಗೆ ಕಾರಣಕರ್ತರಾದರೋ, ಅಂತಹವರನ್ನು ಆಡಿಷನಲ್ ಚೀಫ್-ಸೆಕ್ರೆಟರಿ ಎಂದು ಮಾಡಿದರು. ಇದನ್ನು ನೋಡಿದಾಗ ಇದು ಒಳ್ಳೆಯರಿ ಮಂತ್ಸದ್ದಿ ಸರ್ಕಾರ ಎಂದು ಹೇಳುವುದಕ್ಕೆ ನನಗೆ ನಾಚಿಕೆ ಬರುತ್ತದೆ. ಇವರು ವಸೂಲಿ ಮಾಡಿದ್ದ ಸೇಲ್ಸ್‌ಟ್ಯಾಕ್ಸ್ ಹಣವನ್ನು ವಾಪಸ್ ಮಾಡಬೇಕೆಂದು ಹೈಕೋರ್ಟಿನವರು ತೀರ್ಮಾನ ಕೊಟ್ಟರು. ಆ ತೀರ್ಮಾನದ ಮೇಲೆ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಅಪೀಲ್ ಹೋದರು. ಅಲ್ಲಿಯೂ ಸಹ ಈ ಹಣವನ್ನು ವಾಪಸ್ ಮಾಡ ಬೇಕೆಂದು ತೀರ್ಮಾನವಾಯಿತು. ಇದರ ಅಸಲು ಹಣ ಎಂಟೂವರೆ ಕೋಟಿ ರೂಪಾಯಿಗಳಾದರೆ, ಅದರ ಮೇಲಿನ ಬಡ್ಡಿ ಸೇರಿದರೆ ಸುಮಾರು ೧೭-೧೮ ಕೋಟಿ ರೂಪಾಯಿಗಳಾಗುತ್ತದೆ. ಈ ಹಣವನ್ನು ವಾಪಸ್ಸು ಮಾಡುವ ಬಗ್ಗೆ ಈ ಪೂರಕ ಬೇಡಿಕೆಯಲ್ಲಿ ಪ್ರಾವಿಜನ್ ಮಾಡಿಲ್ಲ. ಅಧಿಕಾರಿಗಳು ಈ ಬಗ್ಗೆ ಕಣ್ಣುಮುಚ್ಚಿ ಕುಳಿತ್ತಿದ್ದಾರೆಯೇ ಎಂದು ಕೇಳುತ್ತೇನೆ ? ಇವರು ಈ ಹಣ ಕೊಡದಿದ್ದರೆ ಕಂಟೆಂಪ್ಟ್ ಆಫ್ ದಿ ಕೋರ್ಟ್ ಆಗುತ್ತದೆ. ಇವರು ಹಣ ವಾಪಸ್ ಮಾಡುವುದಾಗಿ ಕೋರ್ಟಿಗೆ ಬರೆದು ಕೊಟ್ಟಿದ್ದಾರೆ. ಆದರೂ ಕೊಟ್ಟಿಲ್ಲ. ಈ ಬಗ್ಗೆ ಆರ್ಡರ್ ಆಗಿ ೭ ತಿಂಗಳಾದರೂ ಸಹ ಹಣ ಕೊಟ್ಟಿಲ್ಲ. ಈ ಬಗ್ಗೆ ಪತ್ರ ಬರೆದರೆ, ಅದಕ್ಕೆ ಉತ್ತರ ಕೊಡುವ ಸೌಜನ್ಯವೂ ಸಹ ಸರ್ಕಾರದ ಅಧಿಕಾರಿಗಳಿಗೆ ಇಲ್ಲ. ಎಂ.ಎಲ್.ಎ.ಗಳು ಪತ್ರ ಬರೆದರೆ ಅದಕ್ಕೆ ೩ ದಿವಸಗಳೊಳಗಾಗಿ ಉತ್ತರ ಕೊಡಬೇಕೆಂದು ಅಧಿಕಾರಿ ಗಳಿಗೆ ತಿಳಿಸಿದ್ದೇನೆಂದು ಈ ಹಿಂದಿನ ಮುಖ್ಯಮಂತ್ರಿಗಳು ಇಲ್ಲಿ ಹೇಳಿದ್ದರು, ಆದರೆ ಅದರ ಪ್ರಕಾರ ಅವರು ನಡೆದುಕೊಳ್ಳುತ್ತಿಲ್ಲ. ನೀವು ನಮಗೆ ಕೆಲವೊಂದು ಸರ್ಕ್ಯುಲರ್‌ಗಳನ್ನು ಕಳುಹಿಸಿಕೊಡುತ್ತಿದ್ದೀರಿ. ಅದನ್ನು ನೋಡಿದಾಗ ನಮಗೆ ಸಂತೋಷವಾಗುತ್ತದೆ. ಆದರೆ ಈ ಅಧಿಕಾರಿಗಳದ್ದು ನಿಜವಾಗಿಯೂ ದಪ್ಪ ಚರ್ಮವಾಗಿದೆ ಕಾನೂನು ಮಂತ್ರಿಗಳು ಅದನ್ನು ಉಜ್ಜಬೇಕಾಗಿದೆ. ಈ ಸದನದ ಮುಂದೆ ಇಂಥಾದ್ದನ್ನು ತರುವುದಕ್ಕೆ ಬದಲು Blanket ಆಗಿ ಒಂದು Resolution ಪಾಸ್ ಮಾಡಿ ಈ ಸರ್ಕಾರಕ್ಕೆ ಅಧಿಕಾರ ಕೊಟ್ಟುಬಿಡೋಣ. ಆಗ ಇವರು ತಮಗೆ ಬೇಕಾದ್ದು ಮಾಡಬಹುದು, ಬೇಡವಾಗಿದ್ದು ಬಿಡಬಹುದು. ಇದಕ್ಕೆಲ್ಲಾ ಮಾನ್ಯ ಮಂತ್ರಿಗಳು ಯಾವ ರೀತಿಯಿಂದ ಉತ್ತರ ಹೇಳಲಂ ಸಮರ್ಥರಾಗಿದ್ದಾರೆ ? ಅಭಿವೃದ್ಧಿ ಕಾರ್ಯಗಳ ಬಗ್ಗೆ ಇವರಿಗೆ ಏನಾದರೂ ಯೋಚನೆ ಇದೆಯೇ ? ಇಂತಹ ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲವೆಂದು ಹೇಳುವ ಈ ಸರ್ಕಾರಕ್ಕೆ ಕೆಲವು ವಂನೋರಂಜನೆಯ ವ್ಯವಹಾರಗಳಿಗೆ ಖರ್ಚು ಮಾಡಲು ಹಣ ಎಲ್ಲಿಂದ ಬರುತ್ತದೆ ? ರೈತರ ಸಲುವಾಗಿ ಇಂತಹ ಕೆಲಸ ಮಾಡಿದ್ದೇವೆ, ಅವರಿಗೆ ಬೇಕಾದಂಥ ಕೆಲವು ಸಲಕರಣೆಗಳನ್ನು ಕೊಟ್ಟಿದ್ದೇವೆ, ಅದಕ್ಕಾಗಿ ಹಣ ಬೇಕು ಎಂದು ಇವ್ರು ಕೇಳಿಲ್ಲ ? ನೀರಾವರಿ ಯೋಜನೆಗಳಿಗೆ ಹಣ ಕೇಳಿಲ್ಲ. ಈ ಒಂದು ಪುಸ್ತಕವನ್ನು ನೋಡಿದಾಗ ಇವರು ಯಾವ ರೀತಿಯಿಂದ ಮೊಗಲ್ ದರ್ಬಾರ್ ಮಾಡುತ್ತಿದ್ದಾರೆಂಬುದು ತಿಳಿದುಬರುತ್ತದೆ. ಬಹಳ ವ್ಯಸನದಿಂದ ಇದನ್ನು ಪರಾಮರ್ಶಿಸಬೇಕಾಗಿದೆ. ಹೊಸ ಮುಖ್ಯಮಂತ್ರಿಗಳಿಗೆ ಬೆಂಬಲ ಕೊಡೋಣ ಎಂಬ ಮನಸ್ಸು ಇದ್ದರೂ ಸಹ ದುರ್ದೈವದಿಂದ ಮತ್ತು ಅನಿವಾರ್ಯವಾಗಿ ಇದನ್ನು ವಿರೋಧ ಮಾಡಲೇಬೇಕಾಗಿದೆ ? ನಾವು ಇದನ್ನು ವಿರೋಧ ಮಾಡಿದರೂ ಸಹ ಅವರ ಕಡೆ "aye" ಎಂದು ಹೇಳುವ ಜನರು ಇದ್ದಾರೆ ಅವರು ಕೈ ಎತ್ತುತ್ತಾರೆಂದು ಹೇಳಬಹುದು. ಆದರೂ ನಾನು ಆ ಕಡೆ ವಿವೇಕವುಳ್ಳ ಜನರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಾವು ಇದರಲ್ಲಿ ರಾಜಕೀಯ ತರಲು ಇಷ್ಟಪಡುವುದಿಲ್ಲ, ಆದರೆ ಇದೇರೀತಿ ಆರ್ಥಿಕ ವ್ಯವಹಾರಗಳು ನಡೆದಿದ್ದೇ ಆದರೆ, ಈ ಸರ್ಕಾರ ಆರ್ಥಿಕವಾಗಿ ದಿವಾಳಿ ಆಗುತ್ತದೆ ಅಷ್ಟೇ ಅಲ್ಲ, ಮುಂದೆ ಬರುವಂತಹ ಜನರಾಂಗ ಸಹ ನಿಮ್ಮನ್ನು ಶಪಿಸುವಂತಹ ರೀತಿಯಲ್ಲಿ ಆಡಳಿತ ನಡೆಸಂತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಇದರಲ್ಲಿರುವಂತಹ ಪ್ರತಿಯೊಂದು ವಿಚಿನ ಬಗ್ಗೆಯೂ ಹೇಳಬಹುದು. ಆದರೆ ಜಾಗ್ರತೆ ಮಾಡಿಸಿ ಎಂದು ತಾವು ಹೇಳಿದ್ದೀರಿ. ಆದ್ದರಿಂದ ಜಾಗ್ರತೆ ಮಾಡಿಸುತ್ತಿದ್ದೇನೆ. ಯಾವ ಒಂದು ದೃಷ್ಟಿಯಿಂದ ನೋಡಿದರೂ ಸಹ ಇದು ಸ್ವಾಗತಾರ್ಹವಾದಂಥ ಬೇಡಿಕೆಯಾಗಿಲ್ಲ. ಆದ್ದರಿಂದ ಇದನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ (ಗುರುಮಿಟ್ಕಲ್).—ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ. ಹೆಚ್. ಪಾಟೀಲ್ ಅವರು ಹೇಳಿದಂತೆ ಇದು Post mortem ಕೆಲಸವಾಗಿದೆ.

MR. SPEAKER. - Post mortem of a highly decomposed body.

SRI M. MALLIKARJUNA KHARGE.—Yes. Highly decomposed body. ೧೯೪೪-೪೫ರಲ್ಲಿ ಇದು ತಿಗಿದ್ದು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಇದನ್ನು ಕಾಸು ಹಿಡಿದು, ಇದನ್ನ ರೆಗ್ಯುಲರೈಸ್ ಮಾಡಬೇಕು. ಇಲ್ಲದಿದ್ದರೆ ಸರಿಹೋಗುವುದಿಲ್ಲ. ಕಾನೂನು ಬಾಹಿರ ವಾಗುತ್ತದೆ ಆನ್ನತಕ್ಕಂಥ ಮಾತನ್ನು ಹೇಳಿದ ಮೇಲೆ ಇವೊತ್ತು ಇದನ್ನು ಈ ಸದನದ ಮುಂದೆ ತಂದಿದ್ದಾರೆ. ಒಂದು ವೇಳೆ ಪಿ.ಎ.ಸಿ.ನವರು ಇದನ್ನು ಪಾಯಿಂಟ್-ಔಟ್ ಮಾಡದಿದ್ದರೆ ಇದಂ ಈ ಸದನದ ಮುಂದೆ ಬರುತ್ತಿರಲಿಲ್ಲ. ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ...

ಶ್ರೀ ಬಿ. ಬಸವಲಿಂಗಪ್ಪ.— ಈಗ ತಾವು ಪಿ.ಎ.ಸಿ. ಚೇರ್‌ಮೆನ್ ಆಗಿ ಮಾತನಾಡುತ್ತಿದ್ದೀರಿ. ಈ ಹಿಂದೆ ನಾನೂ ಸಹ ಅದರ ಚೇರ್‌ಮಾರ್ ಆಗಿದೆ. ಮಾನ್ಯ ಶ್ರೀನಿವಾಸ್ ಅವರೂ ಸಹ ಆಗಿದ್ದರು, ನಾವು ಇದನ್ನು ಎತ್ತಿ ತೋರಿಸದೇ ಹೋಗಿದ್ದರೆ ಇವರು ಹಾಗೆಯೇ ನಿದ್ದೆ ಮಾಡುತ್ತಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅಂದರೆ ಸುಮಾರು ೬೪ ಕೋಟಿ ೮೬ ಲಕ್ಷ, ೯೫ಸಾವಿರದ ೪೨೫ ರೂಪಾಯಿಗಳು. ಇಷ್ಟು ಹಣವನ್ನು ಈ ಸದನದ ಗಮನಕ್ಕೆ ತರದೆ ಸರ್ಕಾರ ಖರ್ಚು ಮಾಡುತ್ತದೆ ಅಂದರೆ ಎಷ್ಟರ ಮಟ್ಟಿಗೆ ಈ ಇಲಾಖೆಗೆ ಎಚ್ಚರ ಇದೆ ಎನ್ನುವುದು ಇದರಿಂದಗೊತ್ತಾಗುತ್ತದೆ. ಸದನದ ಗಮನಕ್ಕೆ ಬರದೆ ಅವರು ತಮ್ಮ ಬರೀ ಎಕ್ಸಿಕ್ಯೂಟೀವ್ ಆರ್ಡರ್ ಮೇಲೆ ಇಷ್ಟು ಹಣವನ್ನು ಖರ್ಚು ಮಾಡಿಕೊಂಡಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪಾಯಿಂಟ್ ಔಟ್‌ಮಾಡಿ ಇದು ತಪ್ಪಾಗಿದೆ. ಇದನ್ನು ರೆಗ್ಯುಲರೈಸ್ ಮಾಡಬೇಕು, ಇದಂ ಸದನದ ಗಮನಕ್ಕೆ ಬಂದಿಲ್ಲ ಲೆಜಿಸ್ಲೇಚರ್ ಅಪ್ರೂವಲ್ ಆದ ಮೇಲೆ ಇದು ರೆಗ್ಯುಲರೈಸ್ ಆಗುತ್ತದೆ, ಇಲ್ಲಿಯವರೆಗೆ ಖರ್ಚು ಮಾಡಿದ್ದು ತಪ್ಪು ಎಂದು ಹೇಳಿದ್ದಾರೆ, ಇದು ನಿಜವಾಗಲೂ ನಾಚಿಕೆ ಬರತಕ್ಕಂಥ ಮಾತು. ಯಾವ ಸದನದ ಮುಂದೆ ಬರಬೇಕೋ ಅದಂ ಸದನದ ಮುಂದೆ ಬರದೆ, ಡಿಪಾರ್ಟ್‌ಮೆಂಟಲ್ ಲೆವೆಲ್‌ನಲ್ಲೆ ಖರ್ಚು ಮಾಡಿದರೆ ಹೇಗೆ, ಏಕೆ ಈ ರೀತಿ ಆಯಿತು ಇದೇ ಪದ್ಧತಿಯನ್ನು ನೀವು ಅನುಸರಿಸಿದರೆ ನಾಳೆ ಬಜೆಟನ್ನೂ ಕೂಡ ತರಬಾರದು. ಟೋಕನ್ ಗ್ರ್ಯಾಂಡ್ ಎಂದು ೧೦ ಕೋಟಿಗೆ ಅಪ್ರೂವಲ್ ತೆಗೆದುಕೊಂಡು ೧೦೦ ಕೋಟಿ ಖರ್ಚು ಮಾಡತಕ್ಕಂಥ ವ್ಯವಸ್ಥೆ ಒಳಗಿಂದೊಳಗೆ ಮಾಡಿಕೊಂಡರೆ ಈ ಸದನ ಏಕೆ ಇರಬೇಕು? ಯಾವುದೇ ಖರ್ಚು ಮಾಡತಕ್ಕಂಥಾದ್ದು ಇದ್ದರೂ ಕೂಡ ಸದನದ ಗಮನಕ್ಕೆ ತಂದು ಮಾಡಬೇಕು ಎನ್ನುವಂಥಾ ಉದ್ದೇಶದಿಂದ ನಾವು ಬಜೆಟ್ಟನ್ನು ಮಂಡನೆ ಮಾಡತಕ್ಕಂಥಾದ್ದು, ಅದರ ಅಪ್ರೂವಲ್ ತೆಗೆದುಕೊಳ್ಳ ತಕ್ಕಂಥಾದ್ದು, ಓಟ್ ಆನ್ ಅಕೌಂಟ್ಸ್ ತೆಗೆದುಕೊಳ್ಳತಕ್ಕಂಥಾದ್ದು — ಈ ಎಲ್ಲಾ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳುತ್ತೇವೆ. ಆದರೆ ಇವತ್ತು ಸುಮಾರು ೬೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೆ, ಆದೂ ಕೂಡ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪಾಯಿಂಟ್ ಔಟ್ ಮಾಡಿ ಹೇಳಿದ ಮೇಲೆ ಇವತ್ತು ನೀವು ರೆಗ್ಯುಲರೈಸ್ ಮಾಡಿ ಎಂದು ತಂದಿದ್ದೀರಿ. ಈ ರೀತಿ ಆಡಳಿತ ನಡೆಸಿದರೆ ನಿಜವಾಗಲೂ ಬಹಳ ಕಠಿಣವಾಗುತ್ತದೆ. ನಾವು ಅನೇಕ ಸಲ ಹೇಳುತ್ತೇವೆ. ಸಣ್ಣಪುಟ್ಟ ಕೆರೆಗಳಿಗೆ ಹಣ ಕೊಡಿ ಎಂದು ಕೇಳುತ್ತೇವೆ, ಎಲ್ಲಕ್ಕಿಂತಲೂ ಆಶ್ಚರ್ಯವೇನೆಂದರೆ, ಹೋದ ಸದನದಲ್ಲಿ ಮಾನ್ಯ ಬಸವಣ್ಣಪ್ಪನವರು ಸಮಾಜಕಲ್ಯಾಣ ಖಾತೆಯ ಮಂತ್ರಿಗಳಾಗಿದ್ದರು. ಪ್ರಶ್ನೋತ್ತರ ಕಾಲದಲ್ಲಿ ನಾನು ಅವರಿಗೆ ಒಂದು ಪ್ರಶ್ನೆಯನ್ನು ಕೇಳಿದ್ದೆ. ಈ ಪೆಡ್ಡೂಲ್ ಕ್ಯಾಸ್ಟ್ ಪೆಡ್ಡೂಲ್ ಟ್ರೈಬ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಎನ್‌ಹ್ಯಾನ್ಸ್ ಮಾಡಬೇಕು. ಕೆಲವು ಹಾಸ್ಟೆಲ್‌ಗಳಿಗೆ ಫೆಸಿಲಿಟೇಸ್ ಕೊಡಬೇಕು. ಏಕೆಂದರೆ ಈಗ ಪ್ರೈಸಸ್ ಎಲ್ಲಾ ಜಾಸ್ತಿಯಾಗಿಬಿಟ್ಟಿದೆ. ೫೦ ರೂಪಾಯಿ ಕೆ.ಜಿ. ಮೆಣಸಿನ ಕಾಯಿ ಆಗಿದೆ, ಅಕ್ಕಿ ಕೆ.ಜಿ. ಏಳೂವರೆರೂಪಾಯಿ ತನಕ ಹೋಗಿದೆ, ಇಂತಹ ಒಂದು ಪರಿಸ್ಥಿತಿಯಲ್ಲಿ ಆ ಮಕ್ಕಳಿಗೆ ಅನಾನುಕೂಲವಾಗುತ್ತದೆ. ಅದಕ್ಕೆ ಸ್ಕಾಲರ್‌ಶಿಪ್‌ನ್ನು ಎನ್‌ಹ್ಯಾನ್ಸ್ ಮಾಡಬೇಕು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಹೊಟ್ಟೆ ತುಂಬ ಎರಡು ಹೊತ್ತು ಊಟ ಸಿಗಬೇಕು — ಆ ರೀತಿ ವ್ಯವಸ್ಥೆ ಮಾಡಿ ಎಂದುಕೇಳಿದೆ. ಅದಕ್ಕೆ ಅವರುನಾನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ್ನು ಕನ್ಸಲ್ಟ್ ಮಾಡಿ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಪೆಡ್ಡೂಲ್ ಕ್ಯಾಸ್ಟ್ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹೆಚ್ಚು ಮಾಡಿ ಎಂದು ಕೇಳಿದೆ. ಸುಮಾರು ೫೦ ಲಕ್ಷದಿಂದ ಒಂದು ಕೋಟಿ ಜಾಸ್ತಿಯಾಗಬಹುದು. ಆದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರ ಅಪ್ರೂವಲ್ ತೆಗೆದು ಕೊಳ್ಳಲಿಕ್ಕೆ ನೋಡುತ್ತೇವೆ, ಕೇಳುತ್ತೇವೆ, ಮಾಡುತ್ತೇವೆ ಎಂದು ಹೇಳಿದರು. ಆರು ತಿಂಗಳಾಯಿತು,

ಇನ್ನೂ ವರೆಗೆ ಸ್ಕಾಲರ್‌ಶಿಪ್ ಎನ್‌ಹ್ಯಾನ್ಸ್‌ಮೆಂಟ್ ಬಂದಿಲ್ಲ, ಬೋರ್ಡಿಂಗ್ ಚಾರ್ಜಸ್ ಎನ್‌ಹ್ಯಾನ್ಸ್‌ಮೆಂಟ್ ಮಾಡಿಲ್ಲ. ಹಾಸ್ಟೆಲ್ ಕಟ್ಟಡ ಇಲ್ಲ, ಅದಕ್ಕೆ ನಿಮ್ಮ ಹತ್ತಿರ ಹಣ ಇಲ್ಲ. ಸ್ಕಾಲರ್‌ಶಿಪ್, ಇಂಡಸ್ಟ್ರೀಸ್, ಸಿರಿಕಲ್ಚರ್, ಫಾರೆಸ್ಟ್ ಪ್ಲೈನರ್ ಇರಿಗೇಷನ್, ಪಬ್ಲಿಕ್ ವರ್ಕ್ಸ್, ಬಿಲ್ಡಿಂಗ್ಸ್, ರೋಡ್ಸ್ ಅಂಡ್ ಬ್ರಿಡ್ಜಸ್, ಪವರ್ ಅಂಡ್ ಪ್ರಾಜೆಕ್ಟ್ಸ್ ಈ ಇಲಾಖೆಯವರ ಜೊತೆ ಆರ್ಥಿಕ ಇಲಾಖೆಯವರೂ ಸೇರಿಕೊಂಡು ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾನ್ಯ ಆರ್ಥಿಕ ಮಂತ್ರಿಗಳು ಮಾಡಿದ್ದಾರೆ. ಆದರೆ ಬಡವರಿಗೆ ಸಹಾಯ ಮಾಡತಕ್ಕ ಕೆಲಸಗಳಿಗೆ ಹಣವನ್ನು ಕೊಡಿ ಎಂದರೆ ಆರ್ಥಿಕ ಇಲಾಖೆಯವರು ಕೊಕ್ಕೆಯನ್ನು ಹಾಕುತ್ತಾರೆ, ನಮ್ಮಲ್ಲಿ ಹಣ ಇಲ್ಲವಾದ್ದರಿಂದ ಕೊಡಲಾಗುವುದಿಲ್ಲ ವೆಂದು ಹೇಳುತ್ತಾರೆ. ಇದು ಏನು ತೋರಿಸುತ್ತದೆಂದರೆ ನಿಮ್ಮ ಆರ್ಥಿಕ ಇಲಾಖೆಯವರ ಲ್ಯಾಟಿಟ್ಯೂಡ್ ಸೋಷಿಯಲ್ ಮೆಷರ್ಸ್‌ಗೆ ಎಷ್ಟರ ಮಟ್ಟಿಗೆ ಇದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ ಮತ್ತು ಈ ಸರ್ಕಾರಕ್ಕೂ ಕೂಡ ಗೊತ್ತಿಲ್ಲ. ಆಸಕ್ತಿ ತಹಿಸಿ ಕೆಲಸ ಮಾಡುತ್ತಿಲ್ಲವೆಂಬುದಕ್ಕೆ ಇದೊಂದೇ ಉದಾಹರಣೆ ಸಾಕು, ಬೇರೆ ಏನೂ ನಾನು ಹೇಳಬೇಕಾಗಿಲ್ಲ. ಮಕ್ಕಳ ವಿದ್ಯಾಭಾಸಕ್ಕೋಸ್ಕರ ನಾವು ಇಷ್ಟು ದುಡ್ಡು ಖರ್ಚು ಮಾಡುತ್ತೇವೆ, ಅವರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಕಾರ್ಯತಃ ಏನೂ ಇಲ್ಲ ಈ ಮಕ್ಕಳಿಗೆ ೫೦ ರೂಪಾಯಿ ಜಾಸ್ತಿ ಮಾಡಿ, ಕಾಲೇಜು ಮಕ್ಕಳಿಗೆ ೭೫ ರೂಪಾಯಿ ಜಾಸ್ತಿ ಮಾಡಿ, ಎಂದರೆ ನಾವುಕೇಂದ್ರ ಸರ್ಕಾರವನ್ನು ಕೇಳಿಕೊಳ್ಳಬೇಕೆಂದು ಒಂದು ಕಡೆ ಹೇಳುತ್ತಾರೆ, ಎಸ್.ಡಿ.ನವರನ್ನು ಕೇಳಿಕೊಳ್ಳಬೇಕೆಂದು ಇನ್ನೊಂದು ಕಡೆ ಹೇಳುತ್ತಾರೆ. ಆದರೆ ಇಷ್ಟೊಂದು ಕೋಟಿ ಗಟ್ಟಲೆ ಹಣವನ್ನು ಖರ್ಚು ಮಾಡುವುದಕ್ಕೆ ನಿಮಗೆ ಹಣ ಎಲ್ಲಿಂದ ಬಂತು? ಯಾವ ರೀತಿ ಮಾಡಿದಿರಿ? ಅದರಲ್ಲೂ ಕೂಡ ನಮ್ಮ ಲೆಜಿಸ್ಲೇಚರ್‌ನ ಅಪ್ರೂವಲ್ ಇಲ್ಲದೆಯೇ ಖರ್ಚು ಮಾಡಿರತಕ್ಕ ಹಣ ಇದು. ಸ್ವಾಮಿ, ನಾನು ತಮ್ಮನ್ನು ಕೇಳುತ್ತೇನೆ, ಒಂದು ನೇಳೆ ಯಾವುದಾದರೂ ಒಂದು ಕೆಲಸ ಇಂಥಾದ್ದು ಆಗತ್ಯವಿದೆ, ಇದಕ್ಕೆ ಖರ್ಚು ಮಾಡಲೇಬೇಕೆಂದು ತಾವು ಹೇಳುವುದಾದರೆ ಅದಕ್ಕೆ ಖರ್ಚು. ಮಾಡಿಏಕೆಂದರೆ ಕೆಲವು ಕಡೆಗಳಲ್ಲಿ ಎಕ್ಸ್‌ಸ್ ಹಣವನ್ನು ಕೊಡಲೇಬೇಕಾಗುತ್ತದೆ, ಅದಕ್ಕೆ ಕೊಡಿನಾವು ಬೇಡವೆನ್ನುವುದಿಲ್ಲ. ಆದರೆ ಅವಶ್ಯಕತೆ ಇರುವುದನ್ನು ಬಿಟ್ಟು ಅನವಶ್ಯಕ ಬಾಬಿಗೋಸ್ಕರ ಖರ್ಚು ಮಾಡಿದ್ದೀರಿ, ಎಲ್ಲಿ ಖರ್ಚು ಮಾಡಬೇಕೋ ಅಲ್ಲಿ ಮಾಡದೆ, ಬೇಡದ ಕಡೆ ಖರ್ಚು ಮಾಡಿದ್ದೀರಿ.

ಮಾನ್ಯ ಸಭಾಧ್ಯಕ್ಷರೇ, ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮೊನ್ನೆ ನಾವು ಈ ವಿಷಯವನ್ನು ಇಲ್ಲಿ ರೈಸ್ ಮಾಡಿದ್ದೆವು. ಹಿಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ರಾಮಕೃಷ್ಣ ಹೆಗಡೆಯವರು ಹೋದಮೇಲೆ ಕಳೆದ ೩-೪ ದಿನಗಳ ಹಿಂದೆ ಒಂದು ಪ್ರಶ್ನೆಯನ್ನು ಹಾಕಿದಾಗ ಟೀಚರ್ಸ್ ಪೋಸ್ಟ್‌ಗೆ, ಪೋಲಿಸ್ ಇಲಾಖೆಗೆ. ಹೆಲ್ತ್ ಇಲಾಖೆಗೆ ಈ ಎಕಾನಮಿ ಆರ್ಡರನ್ನು ನಾವು ತೆಗೆದುಹಾಕಿದ್ದೇವೆಂದು ಉತ್ತರವನ್ನು ಕೊಟ್ಟಿದ್ದರು. ಸ್ವಾಮಿ, ತಮಗೆ ಹೇಳುತ್ತೇನೆ. ಇನ್ನೂತ್ತೂ ಒಂದು ಚೇಕ್ಕ ಕೂಡ ಆನರ್ ಆಗುತ್ತಿಲ್ಲ. ಒಬ್ಬ ಟೀಚರ್‌ದೂ ಅಪ್ರೂವಲ್ ಇಲ್ಲ. ನಾನು ತಮಗೆ ಪತಕ್ಕ ಹೇಳುತ್ತಿದ್ದೇನೆಂದರೆ ಬೀದರ ನಿಂದ ನನ್ನ ಹತ್ತಿರಕ್ಕೆ ಒಬ್ಬ ಹುಡುಗ ಬಂದಿದ್ದ. ಕಳೆದ ಒಂದು ವರ್ಷದಿಂದ ಅವನ ಅಪಾಯಿಂಟ್‌ಮೆಂಟ್ ಆರ್ಡರ್ ಅಪ್ರೂವಲ್ ಆಗಿಲ್ಲ. ಕೇಳಿದರೆ ಎಕಾನಮಿ ಆರ್ಡರ್ ಎಂದು ಹೇಳುತ್ತಾರೆ. ಹಾಗಾದರೆ ಆ ಶಾಲೆಯ ಮಕ್ಕಳ ಗತಿ ಏನು? ಒಬ್ಬ ಇಂಗ್ಲೀಷ್ ಟೀಚರ್ ಒಂದು ವರ್ಷದಿಂದ ಒಂದು ಶಾಲೆಯಲ್ಲಿಲ್ಲ ಎಂದರೆ ನಾಳೆ ಆ ಮಕ್ಕಳು ಪ್ರೊಫೆಷನಲ್ ಕೋರ್ಸ್‌ಗೆ ಹೇಗೆ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಬೇರೆ ಮಕ್ಕಳ ಜೊತೆ ಅವರು ಸ್ಪರ್ಧೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀಮತಿ ಕೆ. ಎಸ್. ಸಾಗರತ್ನಮ್ಮ.— ಅದೊಂದೇ ಅಲ್ಲ. ೭-೮ ಟೀಚರ್ಸ್ ಇರತಕ್ಕ ಕಡೆಗಳಲ್ಲಿ ಒಬ್ಬ ಟೀಚರೂ ಕೂಡ ಇಲ್ಲ.

ಶ್ರೀ ಎನ್. ಎಂ. ಅಡ್ಯಂತಾಯ್ಯ.— ಇವತ್ತು ಅಟೆಂಡರ್‌ಗಳೂ ಕೂಡ ಶಾಲೆಗಳನ್ನು ತೆರೆಯುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಈ ಸರ್ಕಾರ ಹೇಳಂವುದು ಒಂದು, ನಡೆಮಾಕೊಳ್ಳುವುದು ಇನ್ನೊಂದು. ಈ ವಿಚಾರ ತಮ್ಮ ಗಮನದಲ್ಲೂ ಇದೆಯೆಂದು ನಾನು ಅಂದುಕೊಂಡಿದ್ದೇನೆ. ಇಂಥಿಂಥ ಇಲಾಖೆಗಳಿಗೆ ನಾವು ಎಕಾನಮಿಯನ್ನು ರಿಲ್ಯಾಕ್ಸ್ ಮಾಡಿದ್ದೇವೆಂದು ಹೇಳುತ್ತಾರೆ. ಅಲ್ಲಿ

ಪೋಸ್ಟ್‌ಗಳನ್ನು ಫಿಲಪ್ ಮಾಡಬಹುದಂ. ನೇಮಕಾತಿ ಮಾಡಬಹುದೆಂದು ಹೇಳುತ್ತಿದ್ದಾರೆ. ಆದರೆ ನಿಜವಾಗಿಯೂ ಅಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಒಂದು ಪೋಸ್ಟನ್ನೂ ಕೂಡ ಅಪ್ರೂವ್ ಮಾಡುತ್ತಿಲ್ಲ. ಮೇಜರ್ ಇರಿಗೇಷನ್‌ನಲ್ಲಿ ಅನೇಕ ಕೆಲಸಗಳು ಬಾಕಿ ಇವೆ ಷಹಪುರದ ಶಾಸಕವಿತ್ರರಾದ ಶಿವಶಂಕರಗೌಡರು ಹೇಳುತ್ತಿದ್ದರು. ನೀವು ಯಾವ ಚೆಕ್ಕನ್ನು ತೆಗೆದುಕೊಳ್ಳಬೇಡಿ ಎಂದು ಹೇಳಿದ್ದಾರೆ. ಟೆಲಿಫೋನ್ ಟ್ಯಾಪಿಂಗ್‌ಗೆ ಯಾವ ರೀತಿ ಓರಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದರೋ ಅದೇ ರೀತಿ ಇದಕ್ಕೂ ಓರಲ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ...

ಅಧ್ಯಕ್ಷರು.— ಈ ವಿಚಾರದಲ್ಲಿ ಟೆಲಿಫೋನ್ ಟ್ಯಾಪಿಂಗ್ ವಿಚಾರವನ್ನು ಸೇರಿಸಬೇಡಿ. ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ, ಮಾತನಾಡಿ. ಆದರೆ ಟ್ಯಾಪಿಂಗ್ ವಿಚಾರ ಇಲ್ಲಿ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆಥಾದ್ದನ್ನು ಟ್ಯಾಪ್ ಮಾಡಿ ಎಂದು ಹೇಳಿದಂತೆ...

ಅಧ್ಯಕ್ಷರು.— ಈಗ ಅದು ಬೇಡ.

೧೨–೩೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದಿನ ಮುಖ್ಯ ಮಂತ್ರಿಗಳು ಬಹಳ ಫೈನಾನ್ಸಿಯಲ್ ಎಕ್ಸ್‌ಪರ್ಟ್ ಎಂದು ೧೦–೧೨ ವರ್ಷಗಳು ಆದಮೇಲೆ ಅವರನ್ನೇ ತರಬೇಕೆಂದು ತಂದರು. ಈಗ ಅಧೋಗತಿಗೆ ಹೋಗಿದೆ, ಓರಲ್ ಇನ್‌ಸ್ಟ್ರಕ್ಷನ್ಸ್ ಕೊಡುತ್ತಿರುವುದರಿಂದ ಚೆಕ್ಸ್ ಆನರ್ ಆಗುತ್ತಿಲ್ಲ. ಇಯರ್ ಎಂಡ್‌ನಲ್ಲಿ ತರಿಸಿ ನೋಡಿದಾಗ ಇವರು ಇಟ್ಟಂಥ ಪ್ರಾವಿಜನ್ ಒಂದು, ಎಕ್ಸ್‌ಪೆಂಡೀಚರ್ ಮಾಡುವುದು ಮತ್ತೊಂದು, ಕೊನೆಗೆ ಸೇವಿಂಗ್ಸ್ ತೋರಿಸುವುದೂ. ಅನಂತರ ನಿಮ್ಮ ಡಿಫಿಸಿಟ್ ಬಡ್ಜೆಟ್ ಮೇಕ್‌ಅಪ್ ಮಾಡುವುದು. ಖರ್ಚು ಮಾಡದೇ ಇದ್ದರೆ ದುಡ್ಡು ಉಳಿಯುತ್ತದೆ, ದುಡ್ಡು ಉಳಿದಮೇಲೆ ನಿಮ್ಮ ಡಿಫಿಸಿಟ್ ಬಡ್ಜೆಟ್ ಮೇಕ್ ಅಪ್ ಮಾಡಿಕೊಂಡು ವೆಲ್ ಬಡ್ಜೆಟ್ ಎಂದು ತೋರಿಸುವುದು.

ಅಧ್ಯಕ್ಷರು.— ಆ ಸಂಪ್ರದಾಯ ಮೊದಲಿನಿಂದಲೂ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ತಾವು ಹಳ್ಳಿಗಳಲ್ಲಿ ಜನರು ಮಾತನಾಡುವುದು ಕೇಳಿದರೆ ತಮಗೆ ಗೊತ್ತಾಗುತ್ತದೆ. ಅವರು ಏನು ಹೇಳುತ್ತಾರೆ ಅಂದರೆ ಕೋಳಿ ತಿನ್ನುವವರು ಹೋಗಿ ಕೋಣ ತಿನ್ನುವವರು ಬಂದರು ಎಂದು ಹೇಳುತ್ತಾರೆ.

ಅಧ್ಯಕ್ಷರು.— ಎಲ್ಲಾ ಸರ್ಕಾರ ಒಂದೇ ಇರುತ್ತದೆ. ಈಗ ತಾವು ಜನರಲ್ ವಿಚಾರಕ್ಕೆ ಹೋದಿರಿ. ಡೀವಿಯೇಟ್ ಮಾಡಬೇಡಿ, ವಿಚಾರದ ಬಗ್ಗೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ. ಇವರು ಹಣವನ್ನು ಇಟ್ಟುಕೊಂಡು, ಪ್ರಾವಿಜನ್ ಮಾಡಿಕೊಂಡು, ಚೆಕ್ಸ್ ಕೊಡುತ್ತಿಲ್ಲ. ಆದರೆ ಬೇರೆ ಕಡೆ ಎಕ್ಸ್‌ಸ್ ಗ್ರಾಂಟ್ಸ್ ಕೊಡುತ್ತಿದ್ದಾರೆ. ಅದಕ್ಕೋಸ್ಕರ ನಾನು ಇವೊತ್ತು ಹೇಳಬೇಕಾಗಿದೆ.

Sri K. H. Srinivas.—The subject matter of the discussion itself is deviation.

ಅಧ್ಯಕ್ಷರು.— ಈಗ ತಮ್ಮ ಭಾಷಣ ಸ್ವಲ್ಪ ಡೀವಿಯೇಷನ್ ಆಯಿತು, ವಿಚಾರಕ್ಕೆ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೆ, ಇವರು ಪ್ರೊಸೀಜರ್ ಫಾಲೋ ಮಾಡಿಲ್ಲ. ಡಿಫಿಸಿಟ್ ಮಾಡಿ ತೋರಿಸಿರುವುದರಿಂದ ಇದನ್ನು ಹೇಳಬೇಕಾಗಿ ಬಂತು. ಈಗ ಎಕ್ಸ್‌ಸ್ ಗ್ರಾಂಟ್ಸ್ ಇಟ್‌ಸೆಲ್ಫ್ ಈಸ್ ಡೀವಿಯೇಷನ್. ಇದಕ್ಕೆ ಯಾರು ರೆಸ್ಪಾನ್ಸಿಬಲ್ ? ನಾಲ್ಕು ವರ್ಷಗಳಾದರೂ ಸದನದ ನಜರಿಗೆ ತರದೇ ಏತಕ್ಕೆ ಇಟ್ಟುಕೊಂಡರು ? ಇದಕ್ಕೆ ಕಾರಣರು ಯಾರು?

ಅಧ್ಯಕ್ಷರು.— ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ತಾವು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಎ. ಜಿ. ಪಾಯಿಂಟ್ ಔಟ್ ಮಾಡಿದಮೇಲೆ, ನಾಲ್ಕು ವರ್ಷಗಳ ಮೇಲೆ ಇದು ಬರುತ್ತದೆ ಅಂದರೆ ಏತಕ್ಕೆ ಇದನ್ನು ಮುಚ್ಚಿಟ್ಟರು ? Who is

responsible for this ? I want to know it. Since four years it is pending. Why it has not been pointed out and checked ? ಈಗ ಎಕಾನಮಿಂ ಆರ್ಡರ್ ಕೂಡ ಏನಿದೆ ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು. ಇವ್ಹೊತ್ತು ಅನೇಕ ಕಡೆಗಳಲ್ಲಿ ಚೆಕ್ಸ್ ಆನರ್ ಮಾಡಬೇಡಿ ಎಂದು ಹೇಳಿದ್ದಾರೆ. ಎಕಾನಮಿ ಆರ್ಡರ್ ಮತ್ತೆ ಪ್ರಾರಂಭವಾಗಿದೆ. ಆದ್ದರಿಂದ, ಅದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಅಂತಹ ಈ ಕೆಲಸಗಳನ್ನು ತೆಗೆದುಕೊಳ್ಳುವಂಥ ವಿಚಾರದಲ್ಲಿ ಹೇಳುವುದಾದರೆ, ಪರ್ಚಿಕ್ಯುಲರ್ ಐಟಮ್ಸ್ ಅಂದರೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಇರಬಹುದು, ರೋಡ್ಸ್ ಅಂಡ್ ಬ್ರಿಡ್ಜಸ್ ಇರಬಹುದು, ಮೇಜರ್ ಇರಿಗೇಷನ್ ಇರಬಹುದು, ಪವರ್ ಪ್ರಾಜೆಕ್ಟ್ ಇರಬಹುದು, ಯಾವುದೇ ಇರಬಹುದು. ಈ ವರ್ಷ ಎಷ್ಟು ಖರ್ಚು ಮಾಡುತ್ತೀರಿ ಎನ್ನುತಕ್ಕಂಥ ದೃಷ್ಟಿಯನ್ನು ನೀವು ಇಟ್ಟುಕೊಂಡು ಅಷ್ಟು ಹಣವನ್ನು ಪ್ರಾವಿಜನ್ ಮಾಡಬೇಕು, ಅಷ್ಟು ಹಣವನ್ನು ಖರ್ಚು ಮಾಡತಕ್ಕದ್ದು ಮಾಡಬೇಕು. ಅದನ್ನು ಬಿಟ್ಟು ನಾಮಕಾವಸ್ಥೆ ಎಲ್ಲಿ ೧೦ ಕೋಟಿ ಪ್ರಾವಿಜನ್ ಇಟ್ಟಿರುತ್ತೀರಿ ಅಲ್ಲಿ ೧೦೦ ಕೋಟಿ ಖರ್ಚು ಮಾಡುವುದು, ೧೨೦ ಕೋಟಿ ಪ್ರಾವಿಜನ್ ಇಟ್ಟುಕೊಂಡಿರುವ ಕಡೆ ೫–೬ ಕೋಟಿ ಖರ್ಚು ಮಾಡುವುದು ಮಾಡಿದರೆ ಇದು ಯಾವ ಡಿಸಿಪ್ಲಿನ್ ಕೆಲವೊಂದು ಪ್ರಾಜೆಕ್ಟ್‌ಗೆ ೫೦ ಕೋಟಿ ಕೊಡುತ್ತೀರಿ. ೨೬ಕೋಟಿ ಖರ್ಚು ಮಾಡುತ್ತೀರಿ. ಈಗ ಅವರು ಕೊಟ್ಟಂಥ ಫಿಗರ್ಸ್‌ನಲ್ಲಿಯೇ ಕಂಡುಬರುತ್ತದೆ. ಆಕ್ಚುಯಲ್ ಪ್ರಾವಿಜನ್ ಎಷ್ಟು, ಎಕ್ಸ್‌ಪೆಂಡಿಚರ್ ಮಾಡಿರುವುದು ಎಷ್ಟು, ಮತ್ತೆ ಎಕ್ಸ್‌ಸಸ್ ಎಷ್ಟು ಖರ್ಚಾಗಿದೆ ಇವನ್ನೆಲ್ಲಾ ಅನೇಕ ಕಡೆ ಬಡ್ಜೆಟ್ಟಿನಲ್ಲಿ ನೋಡುತ್ತೇವೆ. ಅದಕ್ಕೋಸ್ಕರ ಇವರು ತಮ್ಮ ಮೈಂಡ್ ಅಪ್ಲೈ ಮಾಡಿ ಪ್ರತಿ ಮೂರು ತಿಂಗಳಿಗೊಮ್ಮೆ, ಅಥವಾ ಎರಡು ತಿಂಗಳಿಗೊಮ್ಮೆ ಅಥವಾ ತಿಂಗಳಿಗೊಂದು ಸಾರಿಯಾ ರಿವ್ಯೂ ಮಾಡುತ್ತಿಲ್ಲ. ಪ್ರತಿಯೊಬ್ಬರೂ ಪ್ರತಿ ತಿಂಗಳು ಯಾವ ಯಾವ ಐಟಮ್‌ಗೋಸ್ಕರ ಎಷ್ಟೆಷ್ಟು ಹಣವನ್ನು ಇಡಲಾಗಿದೆ, ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎನ್ನುವ ಬಗ್ಗೆ ರಿವ್ಯೂ ಮಾಡತಕ್ಕ ಕೆಲಸವನ್ನು ಮಾಡಬೇಕು. ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ರೆಗ್ಯೂಲರೈಸ್ ಮಾಡಿ ಎಂದು ಹೇಳಿದ್ದಾರೆ. ಆದರೆ, ಈ ವ್ಯವಸ್ಥೆ ಮುಂದೆ ಬರಲಾರದಂತೆ ನೋಡಿಕೊಳ್ಳಬೇಕು. ಈಗ ಮಾನ್ಯ ಮುಖ್ಯ ಮಂತ್ರಿಗಳು ಬಂದಿದ್ದಾರೆ. ಪರಿಶಿಷ್ಟ ಜಾತಿ ಮತ್ತು ವರ್ಗದ ಮಕ್ಕಳಿಗೆ ಸ್ಕಾಲರ್‌ಷಿಪ್, ಬೋರ್ಡಿಂಗ್ ಚಾರ್ಜಸ್ ವಿನಾನ್ಸ್ ಮಾಡುತ್ತೇವೆಂದು ಹೇಳಿದ್ದಿರಿ. ಇದರ ಬಗ್ಗೆ ಸ್ಪಷ್ಟವಾಗಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಾನಪ್ಪ — ಮಾನ್ಯ ಅಧ್ಯಕ್ಷರೇ, ೧೯೮೫–೮೬ರಲ್ಲಿ ಮಾಡಿದಂಥ ಖರ್ಚನ್ನು ೧೯೮೮ರಲ್ಲಿ ಸದನದ ಮುಂದೆನ ರೆಕ್ಟಿಫೈ ಮಾಡಲಿಕ್ಕೆ ಬಂದಿದ್ದಾರೆ. ಸುಮಾರು ೬ಳ ಕೋಟಿ ರೂಪಾಯಿಗಳನ್ನು ಸದನದ ಅನುಮತಿ ಇಲ್ಲದೆ ಖರ್ಚು ಮಾಡಿದ್ದಾರೆ ರಾಜ್ಯಾಂಗ ಬದ್ಧವಾಗಿ ನಿಮಗೆ ಅಧಿಕಾರ ಇರಬಹುದು. ಖರ್ಚು ಮಾಡಿದ ಮೇಲೆ ಸದನದ ಒಪ್ಪಿಗೆ ಪಡೆಯಬಹುದು. ಆದರೆ ನಿಮ್ಮ ಹಕ್ಕಿನ ಲಕ್ಷ್ಮಣರೇಖೆ ಇದೆ. ಕೆಲಸ ಮಾಡತಕ್ಕ ಜನ ಇದ್ದಾರೆ. ಬಜೆಟ್ ಹಣವನ್ನು ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಅಲಾಟ್ ಮಾಡಿದ ಮೇಲೆ ಅದರ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕು. ಇವತ್ತು ೧೪ ಡಿಪಾರ್ಟ್‌ಮೆಂಟ್‌ಗಳಲ್ಲಿ ಹೆಚ್ಚುವರಿ ಹಣವನ್ನು ಖರ್ಚು ಮಾಡಿ ಇವತ್ತು ರೆಕ್ಟಿಫೈ ಮಾಡುವುದಕ್ಕೆ ಹೊರಟಿದ್ದೀರಿ. ಮಾನ್ಯ ಬಸವಲಿಂಗಪ್ಪನವರು ಹೇಳಿದಹಾಗೆ ಈ ಹಣವನ್ನು ಖರ್ಚು ಮಾಡಿದರೂ ೧೯೮೮–೮೯ರಲ್ಲಿಯೇ ರೆಕ್ಟಿಫೈ ಮಾಡಬೇಕಿತ್ತು. ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಸರ್ಕಾರದ ಗಮನಕ್ಕೆ ತರುವುದಕ್ಕೆ ಮುಂಚೆ ಮಾಡಬೇಕಿತ್ತು, ಅದನ್ನು ಏಕೆ ಮಾಡಲಿಲ್ಲ ? ಈ ವ್ಯವಸ್ಥೆ ನೋಡಿದಾಗ, ಆಡಳಿತದಲ್ಲಿ ಏನು ಕಂಟ್ರೋಲ್ ಇದೆ ಎಂಬುದು ಗೊತ್ತಾಗುತ್ತದೆ. ದೊಡ್ಡ ದೊಡ್ಡ ಆರ್ಥಿಕ ತಜ್ಞರು ಇದ್ದಾರೆ. ಈ ವ್ಯವಸ್ಥೆ ತಪ್ಪಬೇಕು. ಇವತ್ತು ಜನತಾ ಸರ್ಕಾರ ಇರುವುದರಿಂದ ಇದು ನಡೆಯಿತು. ಒಂದು ಪಕ್ಷ ಇವತ್ತು ಬೇರೆ ಪಕ್ಷದ ಸರ್ಕಾರ ಇದ್ದಿದ್ದರೆ ಈ ಹಣವನ್ನು ರೆಕ್ಟಿಫೈ ಮಾಡಬೇಕಾದವರು ನಾವಲ್ಲ, ಅವರು ಎಂದು ಹೇಳುತ್ತಿದ್ದರು. ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳಬೇಕಾಗುತ್ತದೆ. ಬೇರೆ ಸರ್ಕಾರ ಇದ್ದು, ಅಪ್ರೂವಲ್ ಮಾಡದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು, ಇವತ್ತು ಈ ವಿಚಾರದಲ್ಲಿ ಎ.ಜಿ.ಯವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ೧೯೮೮–೮೯ರ ನಂತರ ಬಜೆಟ್ ಮಂಡನೆ ಮಾಡುವಾಗ ಈಗೇನು ವ್ಯವಸ್ಥೆ ಇದೆ ಅದನ್ನು ಬಿಡಬೇಕು. ೬ಳಕೋಟಿ ಕಡಿಮೆ ಹಣ ಅಲ್ಲ. ಇದೇನೂ ಹತ್ತು ಲಕ್ಷ ಒಂದು ಕೋಟಿ ಅಲ್ಲ. ಸುಮಾರು ನಾಲ್ಕು ವರ್ಷಗಳ ನಂತರ ೬ಳಕೋಟಿ ರೂಪಾಯಿಗಳಿಗೆ ಸದನದ ಒಪ್ಪಿಗೆ ಕೊಡಿ ಎಂದು ತಂದಿರುವುದು ಸಮಂಜಸವಲ್ಲವೆಂದು ಸರ್ಕಾರಕ್ಕೆ ಹೇಳುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಸ್ವಾಮಿ, ಸುಮಾರು ೬ಳಿಕೋಟಿ ೮೬ ಲಕ್ಷ ಹೆಚ್ಚು ಪರಿ ಖರ್ಚು ಮಾಡಿ, ಈ ಸಭೆಯ ಮುಂದೆ ತಂದಿದ್ದಾರೆ, ಇದು ನಿಜವಾಗಿಯೂ ನಮ್ಮ ಮುಖಂಡರುಗಳು ಹೇಳಿದಹಾಗೆ ಮತ್ತು ಮಾನ್ಯ ಖರ್ಗೆಯವರು ಹೇಳಿದಹಾಗೆ ಈ ಸದನಕ್ಕೆ ಯಾವುದೇ ವಿಷಯ ತಿಳಿಸದೆ ಸುಮಾರು ೬ಳಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದರೆ, ಇವರ ಆಡಳಿತದಲ್ಲಿ, ಆಧಿಕಾರಿಗಳ ವ್ಯವಸ್ಥೆಯಲ್ಲಿ ನೆಲೆ ಇಲ್ಲ, ಶಿಸ್ತು ಇಲ್ಲ. ಇವತ್ತು ಸಾಮಾನ್ಯ ಮನುಷ್ಯ ಏನಾದರೂ ಹೆಚ್ಚು ಕಡಿಮೆ ಮಾಡಿದ್ದರೆ ಆತನನ್ನು ಕೆಳಗೆ ಮೇಲೆ ಮಾಡಿ ಮುಂಗಿಬಿಡುತ್ತಿದ್ದರು. ಈ ರೀತಿ ೬ಳಿ ಕೋಟಿ ರೂಪಾಯಿಗಳು ಏತಕ್ಕೆ ಹೆಚ್ಚಳವಾಯಿತು ? ಏತಕ್ಕೆ ಹೆಚ್ಚಳವಾಯಿತ್ತು ಎಂದರೆ ಸಿಮೆಂಟ್, ನೀರಾವರಿ, ಉಕ್ಕು ಎಂದು ಹೇಳಂತ್ತಾರೆ. ಎಲ್ಲಾ ಮುಳುಗಿಸುವುದು ಸಿಮೆಂಟ್ ಮತ್ತು ಉಕ್ಕು ಆಗಿರುತ್ತದೆ. ಆಡಳಿತದಲ್ಲಿ ಸರಿಯಾದ ಶಿಸ್ತು ಬಿಗಿ ಇದ್ದಿದ್ದರೆ ಇಂಥದಕ್ಕೆಲ್ಲಾ ಅವಕಾಶವಾಗುತ್ತಿರಲಿಲ್ಲ. ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರುವುದಕ್ಕೆ ನಡೆಯತಕ್ಕಂಥ ಒಂದು ವ್ಯವಸ್ಥೆಯಿಂದ ಈ ರೀತಿ ಆಗಲಿಕ್ಕೆ ಕಾರಣವಾಗಿದೆ. ಆದ್ದರಿಂದ ಈ ಸದನವನ್ನು ಇಷ್ಟು ಹಣ ಖರ್ಚಾಗಿದೆ ಎಂದು ಕೇಳುತ್ತಿದ್ದಾರೆ. ಒಳ್ಳೆಯ ಕೆಲಸಕ್ಕೆ ಹಣವನ್ನು ಕೇಳುವಾಗ ಹಣವಿಲ್ಲ ಎನ್ನುತ್ತಾರೆ. ಉದಾಹರಣೆ ಹೇಳಬೇಕಾದರೆ ೧೯೮೫ನೇ ಇಸವಿಯಿಂದ ನಮ್ಮ ಕರಾವಳಿಯಲ್ಲಿ ಹೂಳೆತ್ತದೆ ಇದ್ದುದರಿಂದ ಸುಮಾರು ೧೬ನೌಕೆಗಳು ಮುಳುಗಿ ಹೋದವು. ಇದರಿಂದಾಗಿ ೨೦-೪೦ ಲಕ್ಷ ರೂಪಾಯಿಗಳು ನಷ್ಟವಾಯಿತು. ೨೦-೫೦ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೂಳಿಶ್ತಿಸುವ ಕೆಲಸವನ್ನು ಸರ್ಕಾರದವರು ಮಾಡಿದ್ದರೆ ಇಷ್ಟೆಲ್ಲಾ ಅನಾಹುತವಾಗುತ್ತಿರಲಿಲ್ಲ. ಈ ರೀತಿಯಾದ ಕೆಲಸ ಮಾಡುವುದಕ್ಕೆ ಸರ್ಕಾರಕ್ಕೆ ಕಾಳಜಿ ಇಲ್ಲ. ಸರ್ಕಾರದಿಂದ ಆಗುತ್ತಿರತಕ್ಕಂಥ ದುಂದು ವೆಚ್ಚ ಮಾಡಿ ಅಭಿಯಾಚನೆ ಕೇಳುವುದು, ಒಪ್ಪಿಗೆ ಕೊಡಿ ಎಂದು ಕೇಳುವುದು ಸರಿಯಲ್ಲ. ಆದ್ದರಿಂದ ನಾನು ಹೇಳುವುದು ಇದು ಅಭಿಯಾಚನೆಯಲ್ಲ, ಯಾಚನೆಯ ವೆಚ್ಚವಾಗಿದೆ ಎಂದು ಆಪಾದನೆ ಮಾಡಿ ನನ್ನ ಮಾತನ್ನು ಮುಂಗಿಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಈ ಹೆಚ್ಚುವರಿ ಅನುದಾನಗಳಿಗೆ ಸಂಬಂಧಪಟ್ಟ ವಿಷಯದಮೇಲೆ ಸನ್ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ೧೯೮೫-೮೬ನೇ ಇಸವಿಗೆ ಒಟ್ಟು ಹಣವನ್ನು ಕೊಟ್ಟಿರತಕ್ಕಂಥದ್ದು ೩.೮೯೫.೮೦ ಕೋಟಿ ರೂಪಾಯಿಗಳು. ಎಕ್ಸಸ್ ಗ್ರಾಂಟ್ ಕೇಳುತ್ತಿರತಕ್ಕಂಥದ್ದು ೫೪.೮೭ ಕೋಟಿ ರೂಪಾಯಿಗಳು. ಇದು ಶೇಕಡ ೨೦ಕ್ಕಿಂತ ಕಡಿಮೆ ಯಾಗುತ್ತದೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡಿರಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅವರೇ ಹೇಳುತ್ತಿದ್ದಾರೆ ೨೦ ಪರ್ಸೆಂಟ್ ಎಂದು.

ಶ್ರೀ ಎ. ಲಕ್ಷ್ಮೀಸಾಗರ್.— ಲೆಸ್ ಆಗಿರುವುದು ೨ ಪರ್ಸೆಂಟ್ ಎಂದು ಕನ್ನಡದಲ್ಲಿ ಬೇಳಿದ್ದು ತಪ್ಪಾಯಿತು. ಅದನ್ನು ಏತಕ್ಕೆ ದೊಡ್ಡದು ಮಾಡುತ್ತೀರಿ ?

SRI M. MALLIKARJUNA KHARGE.—Even if it is 20% does is mean you need not bring to the notice of the Legislature ? Is it your intention ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ಕೊಡುತ್ತೇನೆ. ನೀವು ಮಧ್ಯೆ ಪ್ರವೇಶ ಮಾಡಿದಕ್ಕೆ ಕೇವಲ ೨ ಪರ್ಸೆಂಟ್ ಕಡಿಮೆಯಾಗಿರತಕ್ಕಂಥ ಎಕ್ಸಸ್ ಗ್ರಾಂಟ್ ಅದನ್ನು ಕೇಳುವುದಕ್ಕೆ ಈ ಸಭೆಯ ಒಪ್ಪಿಗೆಯನ್ನು ಪಡೆಯುವುದಕ್ಕೆ ಇಲ್ಲಿ ಬಂದಿದ್ದೇವೆ. ಸಂಸದೀಯ ೨೦೫ ಕಲಮಿನ ಪ್ರಕಾರ ಈ ರೀತಿಯಾಗಿ ಒಪ್ಪಿಗೆ ಪಡೆಯುವುದಕ್ಕೆ ಅವಕಾಶವಿದೆ.

> "The Governor shall if any money has been spent on any service during a financial year in excess of the amount granted for that service and for that year, cause to be laid before the House or the Houses of Legislature of the State another statement showing the estimated amount of that

expenditure or cause to be presented to the Legislative Assembly of the State a demand for such excess, as the case may be.''

ಇದಕ್ಕೆ ಅನುಗುಣವಾಗಿ ಹೆಚ್ಚುವರಿ ಖರ್ಚುಮಾಡತಕ್ಕಂಥ ಹಣವನ್ನು ಮಂಜೂರು ಮಾಡಬೇಕೆಂದು ಹೇಳಿ ಸಭೆಯ ಮುಂದೆ ನಿರ್ಣಯವನ್ನು ತಂದು ಬೇಡಿಕೆಯನ್ನು ಇಟ್ಟಿದ್ದೇವೆ. ಇದು ಸಂವಿಧಾನಾತ್ಮಕವಾಗಿದೆ ಎನ್ನುವ ಮಾತನ್ನೂ ಸಹ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇದರಲ್ಲಿ ಇಷ್ಟೇ ವರ್ಷಕ್ಕೆ ಕೊಡಬೇಕೆಂದು ಇಲ್ಲ, ಅದು ನನಗೂ ಗೊತ್ತಿದೆ. ಆದ್ದರಿಂದ ಮುಖ್ಯವಾಗಿ ಯಾವ ಯಾವ ವರ್ಷಕ್ಕೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿ ಪೂರಕವಾದ ಟಿಪ್ಪಣಿಯನ್ನು ಸಹಾ ಕೊಟ್ಟಿದ್ದೇವೆ. ಎಷ್ಟೆಷ್ಟು ಹಣವನ್ನು ಯಾವ ಯಾವ ವರ್ಷದಲ್ಲಿ ಏತಕ್ಕೋಸ್ಕರ ಜಾಸ್ತಿ ಖರ್ಚು ಮಾಡಬೇಕಾದ ಪರಿಸ್ಥಿತಿ ಬಂತು ಎಂದು ಇದರಲ್ಲಿ ಪೂರಕವಾಗಿ ಮತ್ತು ಸಮಜಾಯಿಸಿ ಕೊಡತಕ್ಕ ರೀತಿಯಲ್ಲಿ ಇಲ್ಲಿ ಟಿಪ್ಪಣಿ ಕೊಟ್ಟಿದ್ದೇವೆ. ಆದರ ಬಗ್ಗೆ ಹೆಚ್ಚಿನ ಟೀಕೆ ಟಿಪ್ಪಣಿ ಗಳೇನೂ ಬರಲಿಲ್ಲ. ಕೊಟ್ಟಿದ್ದೀರಿ ಎಂದು ನೀವು ಅಷ್ಟೇ ಹೇಳಿದ್ದಾರೆ. ಈಗ ಮುಖ್ಯವಾಗಿ ಮಾನ್ಯ ಸದಸ್ಯರು ಎತ್ತಿರತಕ್ಕ ಒಂದು ಆಕ್ಷೇಪಣೆ ಏನೆಂದರೆ. ಪೊದಲನೆಯದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳದೆ ಹೋಗಿದ್ದರೆ ನೀವು ಇದನ್ನು ಸಭೆಯ ಮುಂದೆ ತರುತ್ತಿರಲಿಲ್ಲವೆಂದು ಮಾನ್ಯ ಖರ್ಗೆಯವರು ಹೇಳಿದ್ದಾರೆ. ಈ ವಾದ ಸರಿಯಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಸಲಹೆ ನೀಡುವುದು ಒಂದು ಕನ್‌ವೆನ್‌ಷನ್. ಅವರು ಕೇಳದೆ ಇದ್ದರೂ ಪೂರಕ ಬೇಡಿಕೆಗಳಿಗೆ ಈ ಸಭೆಯ ಒಪ್ಪಿಗೆಯನ್ನು ಪಡೆಯಲಿಕ್ಕೆ ಇವತ್ತಲ್ಲ ನಾಳೆ ಬರಲೇಬೇಕು.

SRI K. H. SRINIVAS.— If you could yield for a minute, I was the Chairman who dealt with this matter. With all sincerity, I tell this House, there is colossal ignorance on the part of the Departmental Heads who are responsible for committing this expenditure that they should go in for such grants before the Houses of Legislature. ಅದು ಗೊತ್ತೇ ಇಲ್ಲ ಇವರಿಗೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಅಂದರೆ ಅವರೇ ಹೆಚ್ಚುವರಿ ಖರ್ಚು ಮಾಡಿದ್ದಾರೆ. ಇದಕ್ಕೆ ನಾವು ವಿಧಾನಸಭೆಯಲ್ಲಿ ಒಪ್ಪಿಗೆ ಪಡೆಯಬೇಕೆಂಬ ಜ್ಞಾನ ಇಲ್ಲದೇ ಇದ್ದರೆ ಡಿಸಿಪ್ಲಿನ್ ಎಲ್ಲಿಂದ ಬರುತ್ತದೆ? ಅದರ ಬಗ್ಗೆ ಹೇಳುವುದು ಬೇಡವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಪೂರಕ ಬೇಡಿಕೆಗಳಿಗೆ, ಹೆಚ್ಚುವರಿ ಖರ್ಚು ಮಾಡಿರತಕ್ಕ ಹಣಕ್ಕೆ ಈ ಮನೆಯ ಒಪ್ಪಿಗೆ ಇಲ್ಲದಿರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಅದು ಬಾರದೇ ಇದ್ದರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಬಂದೇ ಬರಬೇಕು. ಬಾರದೆ ಇರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈ ಮೊಂಡುತನ ಏತಕ್ಕೆ ? ಮೂರು ವರ್ಷಗಳಿಂದ ಬಾರದೆ ಇರುವಾಗ ೫೦ ವರ್ಷಗಳಾದರೂ ಬಾರದೆ ಇರಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಈ ರೀತಿ ಮಧ್ಯೆ ಮಧ್ಯೆ.....

ಅಧ್ಯಕ್ಷರು.—ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ಕೆ.ಹೆಚ್. ಶ್ರೀನಿವಾಸ್,—ಅವರು ಹೇಳಿದ್ದನ್ನು ಕೇಳುವುದಕ್ಕೆ ತಯಾರಿಲ್ಲ, ಮೂರು ವರ್ಷವಾದರೂ ತರದೆ ಇರುವುದಕ್ಕೆ ಸಾಧ್ಯವಾದರೆ ೫೦ ವರ್ಷವಾದರೂ ತರದೆ ಇರುವುದಕ್ಕೆ ಸಾಧ್ಯವಿದೆ. Departmental Heads should have taken care to bring this before the Legislature. ಅದು ಬಿಟ್ಟು ಪಾಯಿಂಟ್ ಔಟ್ ಮಾಡಿದ ಮೇಲೆ ವಿಧಾನಕ್ಕೆ ತರುತ್ತೇವೆಂದರೆ... ಹೇಗಿದ್ದರೂ ತರುತ್ತಿದ್ದೆವು ಅಂದರೆ ...?

ಶ್ರೀ ಎಂ.ಎನ್. ಆಡ್ಯಂತಾಯ.—ಕೆಳಕ್ಕೆ ಬಿದ್ದರೂ ಮೂಗು ಮೇಲೆ ಅಂದ ಹಾಗೆ ಆಯಿತು.

ಅಧ್ಯಕ್ಷರು.—ಎಲ್ಲರೂ ಮಾತನಾಡಿಯಾಗಿದೆ, ಈಗ ಉತ್ತರ ಕೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬಂದೇ ಬರುತ್ತಿತ್ತು ಎಂದು ಹೇಳುತ್ತಾರೆ. ೪ ವರ್ಷವಾದರೂ ಬಂದಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪಾಯಿಂಟ್ ಔಟ್ ಮಾಡಿದ ಮೇಲೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಏನಾಗಿದೆ ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮುಖ್ಯ ಮಂತ್ರಿಗಳು ಇದ್ದಾರೆ.....

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ಹೇಳಿದ ಮೇಲೆ ಏನಾದರೂ ಹೇಳಲಿ. ಒಂದು ವಾಕ್ಯ...

ಅಧ್ಯಕ್ಷರು.—ಅವರು ಹೇಳಿಯಾಗಲಿ, ಆ ಮೇಲೆ ಬೇಕಾದರೆ ನೋಡೋಣ.

SRI K. H. SRINIVAS.—He is not replying to our point. ಅವರು ಉತ್ತರ ಕೊಡಲಿ. ದಯವಿಟ್ಟು ನಾವು ಹೇಳುವುದನ್ನು ಸ್ವಲ್ಪ ಕೇಳಲಿ. ಎಕ್ಸ್‌ಸ್ ಎಕ್ಸ್‌ಪೆಂಡಿಚರ್ ಆಗುತ್ತದೆ, ಇಲ್ಲವೆಂದು ಹೇಳುವುದಿಲ್ಲ. ಕೆಲವು ಸಂದರ್ಭದಲ್ಲಿ ನ್ಯಾಯವಾಗಿ ಆಗುತ್ತದೆ. ಕೇಂದ್ರ ಸರ್ಕಾರದವರು ಗ್ರಾಂಟನ್ನು ರಿಲೀಸ್ ಮಾಡಿದ ಮೇಲೆ ಕೆಲವು ಯೋಜನೆಗಳನ್ನು ಮಾಡಬೇಕಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಬೇಕಾದಷ್ಟು, ಬೇಡವಾದಷ್ಟು ಎಕ್ಸ್‌ಸ್ ಗ್ರಾಂಟ್ ಮಾಡಿಕೊಂಡು ಅಧಿಕಾರಿಗಳು ತಣ್ಣಗೆ ಕುಳಿತಿದ್ದರೆ ಹೇಗೆ ? ವಿಧಾನಸಭೆಯ ಮುಂದೆ ತೆಗೆದುಕೊಂಡು ಹೋಗಬೇಕೆಂಬ ಪ್ರಜ್ಞೆ ಇಲ್ಲದೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ವಿಮರ್ಶೆ ಮಾಡಿ ತಲೆ ಮೇಲೆ ಹೊಡೆದು ಹೇಳಿದ ಮೇಲೆ ಮಾಡುತ್ತೇವೆಂದರೆ ಆ ಅಧಿಕಾರಿಗಳಿಗೆ ಕಲಿಸುವ ಜವಾಬ್ದಾರಿ ಸರ್ಕಾರಕ್ಕೆ ಇದೆಯೇ ಇಲ್ಲವೇ ಎಂದು ಕೇಳುತ್ತೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳದೆ ಇದ್ದರೂ ಮಾಡುತ್ತಿದ್ದೆವು ಅಂದರೆ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಬೇಡ, ನೀವೇ ಮಾಡಿಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಬೇಡವೆಂದು ಹೇಳಲಿಲ್ಲ. ಅವರು ಹೇಳದೆ ಇದ್ದರೂ ಮಾಡುತ್ತಿದ್ದೆವು. ಮಾಡಲೇಬೇಕಾಗುತ್ತದೆ ಸ್ವಾಮಿ. ನಾನು ಒಂದು ವಾಕ್ಯ ಮುಗಿಸುವ ಹಾಗೆ ಇಲ್ಲ, ಆಗಲೇ ಮಧ್ಯೆ ಏಳುತ್ತಾರೆ.

ಅಧ್ಯಕ್ಷರು.—ಶಾಣಪ್ಪನವರೇ ಕುಳಿತುಕೊಳ್ಳಿ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ಇವರು ಹೇಳುವುದನ್ನೇ ನಾವು ಕೇಳಬೇಕಾ ? ಮೂರು ವರ್ಷ ಆದ ಮೇಲೆ ಏಕೆ ಬಂತು ಎಂದು ಕೇಳಿದರೆ, ಬರುತ್ತದೆ. ನಾವು ತರುತ್ತಿದ್ದೆವು ಎಂಬ ಉತ್ತರವನ್ನು ಕೊಟ್ಟರೆ ಹೇಗೆ ?

ಅಧ್ಯಕ್ಷರು.—ಅವರು ಏನು ಉತ್ತರ ಹೇಳುತ್ತಾರೋ ಕೇಳಿ. ಆ ಮೇಲೆ ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರ ಉತ್ತರ ಮುಗಿಯಲಿ. ತಾವು ಕೇಳುವಂತಹದ್ದು ಇದ್ದರೆ ಆ ಮೇಲೆ ಕೇಳಿ. ನೀವು ಹೇಳಿದಂತಹ ಪಾಯಿಂಟ್ಸ್‌ಗೆ ಅವರು ಉತ್ತರ ಹೇಳದಿದ್ದರೆ ಪುನಃ ಕೇಳಿ. ಆದರೆ ಈಗ ಅವರು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಮತ್ತು ಟೀಕೆ ಟಿಪ್ಪಣಿಗಳನ್ನು ಮಾಡಿದರು. ಅವರು ಮಾತನಾಡುವಾಗ ನಾನು ಮಾತನಾಡಲೇ ಇಲ್ಲ. ಆದರೆ ನಾನು ಉತ್ತರ ಹೇಳತಕ್ಕಂತಹ ಸಂದರ್ಭದಲ್ಲಿ ಒಂದು ವಾಕ್ಯ ಮುಗಿಯುವುದಕ್ಕಿಂತ ಮುಂಚಿತವಾಗಿಯೇ ಅವರು ಏಕೆ ಆ ರೀತಿ ಮಾಡಿದ್ದು ಎಂಬುದಾಗಿ ಕೇಳುತ್ತಿದ್ದಾರೆ. ಮಾನ್ಯ ಸದಸ್ಯರುಗಳಿಗೆ ಸಮಾಧಾನವಾಗುವ ರೀತಿಯಲ್ಲೇ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಷ್ಟನ್ನೇ ಹೇಳಬಹುದೇ ಹೊರತು ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ಅಕೌಂಟ್ಸ್ ಪಿ.ಎ.ಸಿ. ಮುಂದೆ ಬರಬೇಕು. ಅವರು ಹೇಳಿದ್ದು ಸರಿ. ಸಂವಿಧಾನದ ಶಿಫಾರಸಿಕೆಯ ಪ್ರಕಾರ ಪಿ. ಎ. ಸಿ. ಮುಂದೆ ಬರದಿದ್ದರೂ ಈ ಪೂರಕ ಬೇಡಿಕೆ, ಅಂದರೆ ಹೆಚ್ಚುವರಿಯಾಗಿ ಖರ್ಚು ಮಾಡಿರತಕ್ಕ ಹಣಕ್ಕೆ ಮಂಜೂರಾತಿಯನ್ನು ಪಡೆಯುವುದಕ್ಕೆ ಈ ಸಭೆಯ ಮುಂದೆ ಬರಲೇಬೇಕು. ಇದು ಒಂದು. ಎರಡನೆಯದಾಗಿ. ಅಕೌಂಟ್ಸ್ ಫೈನಲೈಸ್ ಆಗುವುದಕ್ಕೆ ಕೊನೆಯ ಪಕ್ಷ ೩-೪ ವರ್ಷಗಳಾದರೂ ಬೇಕಾಗುತ್ತದೆ. ಅಕೌಂಟ್ಸ್ ಫೈನಲೈಸ್ ಆದ ಮೇಲೆ ಈ ರೀತಿಯ ಹೆಚ್ಚುವರಿ ಖರ್ಚು ಆಗಿದೆ ಎನ್ನತಕ್ಕ ತಿಳುವಳಿಕೆ ಮನದಟ್ಟಾಗುತ್ತದೆ. ಆದ್ದರಿಂದ ಇಲ್ಲಿ ವಿಳಂಬ ಆಗುತ್ತದೆ ಎನ್ನತಕ್ಕ ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಒಂದೇ ಅಲ್ಲ. ಹಿಂದಿನ ಸರ್ಕಾರಗಳು ಒಂದೇ ಅಲ್ಲ, ಇದು ಅನೂಚಾನವಾಗಿ ನಡೆದುಕೊಂಡು ಬಂದಿರತಕ್ಕಂತಹದ್ದು. ಇನ್ನು ಮೂರನೆಯ

ವಿಚಾರ ಶಿಸ್ತನ್ನು ಅನುಸರಿಸಬೇಕೆಂಬ ಮಾತನ್ನು ಹೇಳಿದ್ದಾರೆ. ಆ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಆಯವ್ಯಯದ ಪಟ್ಟಿಯನ್ನು ತಯಾರು ಮಾಡಬೇಕು ಎನ್ನುತಕ್ಕ ವಾದ ಏನು ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪ್ರತಿ ವರ್ಷ ನಡೆದು ಬಂದ ಸಮಯವನ್ನು ಗಮನಿಸುವುದಾದರೆ, ಒಂದೊಂದು ಸಾರಿ ಜಾಸ್ತಿ ಹಣ ಖರ್ಚಾಗುತ್ತದೆ. ಒಂದೊಂದು ಸಾರಿ ಕಡಿಮೆ ಹಣ ಖರ್ಚಾಗುತ್ತದೆ. ಈ ರೀತಿ ಮಾಡದೆ ಬೇರೆ ಮಾರ್ಗವೇ ಇಲ್ಲ. ಎಲ್ಲ ಸರ್ಕಾರಗಳಲ್ಲೂ ಈ ವ್ಯವಸ್ಥೆ ಇದೆ. ಕಾನೂನಿನಲ್ಲಿ ತಿದ್ದಿಕೊಳ್ಳುವುದಕ್ಕೆ ವ್ಯವಸ್ಥೆ ಇದೆ. ಆದರೆ ಕಾನೂನಿನಲ್ಲಿ ಅವಕಾಶ ಇಲ್ಲ ಅಂತ ಹೇಳಿದರು. ಒಂದು ರೂಪಾಯಿಯನ್ನು ಜಾಸ್ತಿ ಖರ್ಚು ಮಾಡಬೇಡಿ ....

ಶ್ರೀ ಬಿ. ಬಸವಲಿಂಗಪ್ಪ.—ಯಾರು ಹೇಳಿದರು.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ಮಾತನ್ನು ಹೇಳಿದ್ದಾರೆ. ಡಿಸಿಪ್ಲೀನ್ ಅಂದರೆ ಏನು ಬೆಂಬುದಾಗಿ ಹೇಳಿದ್ದಾರೆ. ಸನ್ಮಾನ್ಯ ಶ್ಯಾನಭೋಗ್ ಅವರು ಎಷ್ಟು ರೂಪಾಯಿಗಳನ್ನು ಖರ್ಚು ಮಾಡ ಎಕೆಂದು ಮಂಜೂರಾತಿ ಪೆಡೆದಿದ್ದೀರೋ ಅಷ್ಟನ್ನೇ ಖರ್ಚು ಮಾಡಬೇಕು ಅಂತ ಹೇಳಿದ್ದಾರೆ. ಆ ರೀತಿ ಮಾಡುವುದಕ್ಕಾಗುವುದಿಲ್ಲ. ಅಡಳಿತವನ್ನು ನಡೆಸತಕ್ಕಂತಹ ಸಮಯದಲ್ಲಿ ಈ ರೀತಿಯ ಹೆಚ್ಚು-ಕಡಿಮೆಯಾಗುತ್ತವೆ. ಅದನ್ನು ತಿದ್ದಿಕೊಳ್ಳುವುದಕ್ಕೆ ವ್ಯವಸ್ಥೆ ಇದೆ. ಈ ಸಭೆಯ ಒಪ್ಪಿಗೆಯನ್ನು ಪಡೆಯುವುದಕ್ಕೆ ವ್ಯವಸ್ಥೆ ಇದೆ ಎನ್ನುವ ಮಾತನ್ನು ಬಹಳ ವಿನಯದಿಂದ ಅವರಿಗೆ ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಮಾತನ್ನು ಸನ್ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಅದೇನೆಂದರೆ. ಒಂದು ಆರ್ಥಿಕ ಶಿಸ್ತು ಇರಬೇಕು. ಅಧಿಕಾರಿಗಳು ಆಯವ್ಯಯ ಪಟ್ಟಿಯನ್ನು ತಯಾರು ಮಾಡತಕ್ಕ ಸಮಯದಲ್ಲಿ, ಖರ್ಚು ಮಾಡತಕ್ಕ ಸಮಯದಲ್ಲಿ, ಎಷ್ಟು ಅನುದಾನ ಬಂದಿದೆ, ಎಷ್ಟು ಜಾಸ್ತಿಯಾಗುತ್ತದೆ ಎನ್ನುವುದರ ಕಡೆ ಗಮನ ಇರಬೇಕು ಶಿಸ್ತು ಇರಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಯಾವುದೇ ಸಂಶಯವೇ ಇಲ್ಲ. ಅಧಿಕಾರಿಗಳು ಶಿಸ್ತನ್ನು ಪಾಲಿಸಿ, ಮಂಜೂರಾಗಿರತಕ್ಕ ಹಣವನ್ನು ಉಪಯೋಗಕ್ಕೆ ಕೊಡುವ ಕಡೆ ಗಮನಕೊಟ್ಟು ವ್ಯವಸ್ಥೆ ಮಾಡಬೇಕು ಎನ್ನುತಕ್ಕ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ ಸನ್ಮಾನ್ಯ ಶ್ರೀನಿವಾಸ್ ರವರು ಹೇಳಿದರು. ನೀವು ನಿಮಗೆ ಕೊನೆಯ ಪಕ್ಷ ಭರವಸೆಯಿನ್ನಾದರೂ ಕೊಡಿ ಅಂತ. ಈ ಭರವಸೆಯನ್ನು ಅವರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ, ಶಿಸ್ತಿನಿಂದ, ಹೆಚ್ಚು ಜಾಗ್ರತೆ ವಹಿಸಿ, ವೀಕ್ಷಣೆಯಿಂದ ಮಾನ್ಯ ಸದಸ್ಯರು ಹೇಳಿದ್ದನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುತಕ್ಕ ಭರವಸೆಯನ್ನು ಸನ್ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅಮೇಲೆ ಸನ್ಮಾನ್ಯ ಕೆ.ಎಚ್. ಪಾಟೀಲ್‌ರವರು ಇದು ಮೊಗಲ್ ದರ್ಬಾರು ಎಂಬುದಾಗಿ ಹೇಳಿದ್ದಾರೆ, ಈ ದೇಶದ ಸಂವಿಧಾನ ಎಲ್ಲಿಯವರೆಗೆ ಇರುತ್ತದೋ. ಅಲ್ಲಿಯವರೆಗೆ ಮೊಗಲ್ ದರ್ಬಾರು ಅಥವಾ ಬೇರೆ ರೀತಿಯ ದರ್ಬಾರ್, ಪಾಟ್ಕೀಗಾರಿಕೆ ದರ್ಬಾರುಗಳಲ್ಲಿ ನಡೆಯುವುದಕ್ಕೆ ಸಾಧ್ಯ ಇಲ್ಲ. ಈ ಮಾನ್ಯ ಮಾನ್ಯ ಸಭೆಗೆ ಮತ್ತು ಮೇಲ್ಮನೆಗೆ ಹಣವನ್ನು ಖರ್ಚು ಮಾಡತಕ್ಕ ವಿಷಯದಲ್ಲಿ ಈ ಎರಡೂ ಮನೆಯ ಒಪ್ಪಿಗೆಯನ್ನು ಬಿಟ್ಟು ಮಾಡುವುದಕ್ಕೆ ಸಾಧ್ಯ ಇಲ್ಲ ಒಂದು ಪೈಸೆ ಇರಬಹುದು, ೨ ಪೈಸೆ ಇರಬಹುದು ಆದರೆ ಖರ್ಚುಮಾಡುವುದರಲ್ಲಿ ಹೆಚ್ಚು ಕಡಿಮೆಯಾಗಬಹುದು. ನ್ಯೂ ಸರ್ವೀಸ್‌ನಲ್ಲಿ ಅವಕಾಶ ಇದೆ. ಆರ್ಟಿಕಲ್೨೦೩ರಪ್ರಕಾರ ಒಂದೊಂದು ಸಾರಿ ಗೊತ್ತಿಲ್ಲದೇಇರತಕ್ಕರೀತಿಯಲ್ಲಿ ಹಣವನ್ನು ಖರ್ಚುಮಾಡ ಬೇಕಾಗುತ್ತದೆ. ಆದ್ದರಿಂದ ಇವೆಲ್ಲಾ ಇದರಲ್ಲಿ ಸೇರಿಕೊಂಡಿದೆ. ತಡವಾಗಿ ಎನ್ನುವ ಮಾತನ್ನು ಹೇಳಿದ್ದಾರೆ. ಅಕೌಂಟ್ಸ್ ಫೈನಲೈಸ್ ಆಗುವುದರಲ್ಲಿ ತಡವಾಗುತ್ತದೆ. ೩ ವರ್ಷಗಳಿಗಿಂತ ಜಾಸ್ತಿಯಾಗುತ್ತದೆ. ಆದು ಆದಮೇಲೆ ಈ ಎಸ್ಸಸ್ ಎಕ್ಸ್‌ಪೆಂಡೀಚರ್ ಎನ್ನು ಎಂದು ಗೊತ್ತಾಗುತ್ತದೆ. ಆದಾದಮೇಲೆ ಇಲ್ಲಿ ತಂದಿದ್ದೇವೆ. ಇದನ್ನು ನಾವೊಬ್ಬರೇ ಏನು ಮಾಡಿದ್ದು ಅಲ್ಲ. ಮಾನ್ಯ ಸದಸ್ಯರು ಮಾಡಿರತಕ್ಕ ಭಾಷಣದ ಒಟ್ಟು ಸಾರಾಂಶ ನೋಡಿದರೆ, ಏನೋ ಮಾಡಬಾರದ ತಪ್ಪು ಮಾಡಿದ್ದೇವೆನ್ನುವ ಭಾವನೆ ಬರುತ್ತದೆ. ಅಕ್ಷಮ್ಯ ತಪ್ಪು, ಮೊಗಲ್ ದರ್ಬಾರು ಎನ್ನುವ ವಾದಸರಣಿ ಇಲ್ಲಿ ಬಂತು. ಖರ್ಚು ಮಾಡುವುದರಲ್ಲಿ ಹೆಚ್ಚು ಕಡಿಮೆ ಆಗಿದೆ. ಈ ಸಭೆಯು ಒಪ್ಪಿಗೆಗೆ ತಂದಿದ್ದೇವೆ. ವಿಳಂಬಕ್ಕೆ ಕಾರಣ ಹೇಳಿದ್ದೇನೆ. ಈ ಸಭೆಯಲ್ಲಿ ಇದು ಪ್ರತಿವರ್ಷ ನಡೆಯುತ್ತದೆ. ಇದು ಹೊಸದಲ್ಲ. ಈ ವಿಚಾರವನ್ನು ಮಾನ್ಯ ಸದಸ್ಯರು ಗಮನದಲ್ಲಿ ಇಟ್ಟುಕೊಂಡು ಈ ಹೆಚ್ಚುವರಿ ಖರ್ಚು ಮಾಡಿರತಕ್ಕ

ಹೆಚ್ಚುವರಿ ಅನುದಾನಗಳ ಬೇಡಿಕೆಗೆ ಅನುಮತಿ ಕೊಡಬೇಕೆಂದು ನಾನು ಸದಸ್ಯರಲ್ಲಿ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಬೇಡಿಕೆಗಳಿಗೆ ಏನೆಂ ಭಾಷಣ ಮಾಡಿದರು ಅದಕ್ಕೆ ಅವರು ಏನು ಉತ್ತರ ಕೊಟ್ಟರು ಅದು ವಿರುದ್ಧ ಉತ್ತರ ಆಗಿತ್ತು. ಜಟಕಾ ಗಾಡಿಯಲ್ಲಿ ಕುದುರೆಯ ಕಣ್ಣು ಮುಚ್ಚಿ ಹೇಗೆ ನೇರವಾಗಿ ಹೊಡೆಯುತ್ತಾರೋ ಹಾಗೇ ಇವರು ವಿರೋಧ ಮಾಡುವುದೇ ಆಗಿದೆ. ಹೆಚ್ಚುವರಿ ಅನುದಾನಗಳ ಬೇಡಿಕೆಗಳನ್ನು ಸಭೆಯಲ್ಲಿ ಅಂಗೀಕಾರ ಮಾಡಬಾರದು ಅಥವಾ ಬಿಡಬೇಕು ಎಂದು ಅಲ್ಲ. ಇದನ್ನು ಯಾವಾಗ ಒಪ್ಪಬೇಕು, ಯಾವಾಗ ಸದನಕ್ಕೆ ತರಬೇಕೆನ್ನುವುದು ಪ್ರಶ್ನೆ. ೧೯೮೫–೮೫ನೇ ಸಾಲಿನಲ್ಲಿ ಖರ್ಚು ಮಾಡಿರತಕ್ಕೆ ಹೆಚ್ಚುವರಿ ಹಣವನ್ನು ಈ ಸದನದ ಒಪ್ಪಿಗೆಗೋಸ್ಕರವಾಗಿ ಆ ವರ್ಷವೇ ತೆಗೆದುಕೊಂಡುಬರಬೇಕಾಗಿತ್ತು ಅಥವಾ ಮುಂದಿನ ವರ್ಷದಲ್ಲಾದರೂ ತೆಗೆದುಕೊಂಡು ಬಂದು ಒಪ್ಪಿಗೆ ಪಡೆದುಕೊಳ್ಳಬಹುದಿತ್ತು ಆದು ಬಿಟ್ಟು ೪ ವರ್ಷಗಳಾದಮೇಲೆ ತಂದಿದ್ದೀರಿ. ನಿಮ್ಮ ಅಧಿಕಾರಿಗಳ ಮೇಲೆ ನಿಮಗೆ ಹತೋಟಿ ಇಲ್ಲವೇ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಿ ಎನ್ನುವುದು ಎಲ್ಲರ ಒಟ್ಟಾರೆ ಅಭಿಪ್ರಾಯ. ಇದಕ್ಕೆ ಅವರು ಹೇಳುವುದು, ನಾವು ಇದನ್ನು ತರಬೂರದೇ ಎಂದು. ಇದನ್ನು ತರಬಾರದು ಎಂದು ಯಾರೂ ಹೇಳಿಲ್ಲ. ೨೦೫ನೇ ವಿಧಿ ಪ್ರಕಾರ ಎಲ್ಲಾ ಸರ್ಕಾರ ಮಾಡುತ್ತವೆ. ಈ ಸರ್ಕಾರವೂ ಮಾಡುತ್ತದೆ. ಆದರೆ ಯಾವಾಗ ತರಬೇಕು ಎಂಬುದು ಪ್ರಶ್ನೆ. ಇದಕ್ಕೆ ಅವರು ಉತ್ತರ ಕೊಡಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಅಕೌಂಟೆಂಟ್ ಜನರಲ್ ಅವರು ಅಕೌಂಟ್ಸ್ ಫೈನಲೈಸ್ ಮಾಡಿ ೧೯೮೫–೮೫ನೇ ಲೆಕ್ಕದಲ್ಲಿ ಇಂತಹದ್ದು ಆಗಿದೆ ಎಂದೇ ನಮಗೆ ವರದಿಯು ೧೯೮೬ನೇ ಆಗಸ್ಟ್‌ನಲ್ಲಿ ಬಂದಿದೆ ವರದಿ ನಮಗೆ ಬರಬೇಕಾದರೆ ಅಕೌಂಟ್ಸ್ ಫೈನಲೈಸ್ ಆಗಬೇಕಾಗುತ್ತದೆ.

ಶ್ರೀ ಕೆ.ಎಚ್. ಪಾಟೀಲ್.—ತಪ್ಪು ಮಾಡಿದ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಿ. ೧೦ ರೂಪಾಯಿ ಭತ್ಯೆ ಕೊಡುವುದನ್ನು ಮುಂದಕ್ಕೆ ಹಾಕುತ್ತಾರೆ. ಇವತ್ತು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಮಂಜೂರು ಕೊಡುವುದಕ್ಕೆ ಎರಡೂವರೆ ವರ್ಷ ಬೇಕೆಂದರೆ ಯಾವ ರೀತಿ ಅವರನ್ನು ಡಿಫೆಂಡ್ ಮಾಡುತ್ತೀರಿ ? ಇದು ೧೯೮೬ರ ಆಗಸ್ಟ್‌ನಲ್ಲಿ ಬಂತು ಎಂದರೆ ತಾವು ಬಡ್ಜೆಟ್‌ನಲ್ಲಿ ತರಬಹುದಿತ್ತು. ಇನ್ನು ಮೇಲೆ ಹೀಗೆ ಮಾಡುವುದಿಲ್ಲ ಎಂದು ತಾವು ಒಪ್ಪಿಕೊಳ್ಳಿ. ತಪ್ಪು ಮಾಡಿದ ಅಧಿಕಾರಿಗೆ ಪ್ರಮೋಷನ್ ಕೊಟ್ಟು ಅಡಿಷನಲ್ ಸೆಕ್ರೆಟರಿ ಮಾಡಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಅಕೌಂಟೆಂಟ್ ಜನರಲ್‌ರವರು ಕೊಟ್ಟಿರತಕ್ಕ ಒಂದು ವಿವರಣೆ ಈ ರೀತಿ ಇದೆ. "Appropriation Accounts of the Government of Karantaka for the year 1984–85 have been prepared and examined under my direction in August/ 1986." ಅವರು ಇದರಲ್ಲಿ ಹೆಚ್ಚು ಕಡಿಮೆ ಇದೆ ಎಂದು ತೋರಿಸಿದ ಮೇಲೆ ಈ ರೀತಿ ಹೆಚ್ಚು ಖರ್ಚು ಆಗಿರುವುದರಿಂದ ಈ ಸಭೆಯ ಅನುಮತಿ ಬೇಕೆಂದು ಹೇಳಿ ಇಲ್ಲಿ ತಂದಿದ್ದೇವೆ. ತಾವು ಮಂತ್ರಿಗಳಾಗಿದ್ದಾಗಲೂ ಇದು ನಡೆಯಿತು. ಇದೇನೂ ಹೊಸದೇನೂ ಅಲ್ಲ.

SRI K.H. PATIL.—Are you justifying the action of the Officer ? Why you are delying ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಯಮ ೨೦೫ರ ಪ್ರಕಾರ ಇದಕ್ಕೆ ಉತ್ತರ ಬರಲಿಲ್ಲ. ನೀವೇ ಓದಿ ಹೇಳಿದ್ದನ್ನು ತಮ್ಮ ತಮನಕ್ಕೆ ಈಗ ತರುತ್ತಿದ್ದೇನೆ.

1-00 p.m.

"If the amount authorised by any law made in accordance with the provisions of the Article 204 to be expended by a particular service for the current financial year is found to be insufficient for the purpose of that year or when a need has arisen during the current financial year

for supplementary or additional expenditure upon some new services not contemplated in the annual financial statement for the year, or

(b) if any amount has been spent on any new service during a financial year in excess of the amount granted for that service and for that year,

cause to be laid before the House or the Houses of the Legislature of the State another statement showing the estimated amount of that expenditure or cause to be presented to the Legislative Assembly of the State a demand."

ಅದನ್ನು ಅದೇ ವರ್ಷ ಕೊಡಬೇಕು ಎಂದು ಇದೆ. ಆದರೆ ೧೯೮೪-೮೫ ರಿಂದ ಮುಂದಿನ ವರ್ಷ ಕೊಡಬಹುದು. ನಾವು ಅದನ್ನು ಕೇಳುತ್ತಾ ಇದ್ದರೆ ಇವತ್ತು ಪ್ರತಿಸಲವೂ ಅದನ್ನೇ ಹೇಳುತ್ತಿದ್ದಾರೆ ಇದು ಮೂರು ವರ್ಷದ್ದು ಇದೆ. ಇದನ್ನು ಒಪ್ಪಿಕೊಳ್ಳಬೇಕು, ಈ ರೀತಿ ಆಗಬಾರದು ಎಂದು ಹೇಳಿದರೆ ನಾನು ಹೇಳಿದ್ದೇ ಸರಿ, ತಾನಾಗಿಯೇ ಬರುತ್ತಿತ್ತು, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಪಾಯಿಂಟ್‌ಔಟ್ ಮಾಡಿದ್ದು ಬಿಟ್ಟರೆ ದೊಡ್ಡದೇನೂ ಅಲ್ಲ ಎನ್ನತಕ್ಕಂಥ ರೀತಿಯಲ್ಲಿ ಏನು ಹೇಳುತ್ತಾರೆ ಅದು ಸರಿಯಲ್ಲ. ಅವರು ಕೋಟ್ ಮಾಡಿರತಕ್ಕಂಥ ಆರ್ಟಿಕಲ್ ೨೦೫ರ ಪ್ರಕಾರ ಕೂಡ he should have presented this on the same year if not next year at least but not after four years.

ಶ್ರೀ ಎ. ಲಕ್ಷ್ಮೀಸಾಗರ್.—ವಿಚಾರವನ್ನು ಸರಿಯಾಗಿ ಹೇಳಬೇಕು. ಅಕೌಂಟ್ಸ್ ಫೈನಲೈಸ್ ಆಗಬೇಕು, ಆಯಾಯ ವರ್ಷದ್ದು ಬರುವುದಿಲ್ಲ. ಹಿಂದಿನ ವರ್ಷದ್ದು ೧೯೮೭-೮೮ರದ್ದು ಈ ವರ್ಷ ಬರುವುದಿಲ್ಲ. ಏಕೆಂದರೆ ಅಕೌಂಟ್ಸ್ ಫೈನಲೈಸ್ ಆಗಬೇಕು ಎ.ಜಿ. ಅದನ್ನು ನೋಡಬೇಕು. ೧೯೮೪-೮೫ನೇ ಇಸವಿಯದ್ದು ೯೬ ರಲ್ಲಿ ಬಂದಿದೆ. ಅದಾದಮೇಲೆ ಪಿ ಎ ಸಿ ಮುಂದೆ ಬಂದಿದೆ. ಅವರು ನೋಡಿರತಕ್ಕಂಥದ್ದು ೧೯೮೮ನೇ ಇಸವಿಯೊಳಗೆ ಅದಕ್ಕೋಸ್ಕರ ತಡವಾಗಿದೆ. ಫಾರ್ ದಟ್ ಈಯರ್ ಅಂದರೆ ಒಂದೊಂದು ವರ್ಷಕ್ಕೂ ನಾವು ಅಕೌಂಟ್ಸ್ ಮಾಡಿ, ಎಕ್ಸ್‌ಸ್ ಎಕ್ಸ್‌ಪೆಂಡಿಚರ್ಸ್ ಏನಿದೆ ಅದಕ್ಕೆ ಈ ಸಭೆಯ ಅನುಮತಿ ಪಡೆಯುಬೇಕೆಂದು ಅದರಲ್ಲಿದೆ. ಆ ವರ್ಷವೇ ತರಬೇಕೆಂದು ಅರ್ಥವಿಲ್ಲ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೪-೮೫ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಂಜೂರು ಮಾಡಿದ, ಪೊಲೀಸಿಗೆ ಹೆಚ್ಚುವರಿ ಅನುದಾನಕ್ಕಾಗಿ ಬೇಡಿಕೆ ಸಂಖ್ಯೆ ೭೮,೩೧,೪೨,೪೪,೪೫,೪೬,೪೭,೪೮,೪೯, ಮತ್ತು ೫೧, ಇವುಗಳ ಸೇವೆಗಳಿಗೆ ನೀಡಲಾದ ಹೆಚ್ಚುವರಿ ಅನುದಾನವನ್ನು ಕ್ರಮಗೊಳಿಸಲು ಸರ್ಕಾರಕ್ಕೆ ೧೯೮೪-೮೫ನೇ ಸಾಲಿನಲ್ಲಿ ಅಭಿಯಾಚನೆ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತಕ್ಕೆ ಮಿಂ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಹೆಚ್ಚುವರಿ ಅನುದಾನಗಳಿಗೆ ಮಂಜೂರಾತಿಯು ನೀಡಲಾಯಿತು.

(ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾತಿ ನೀಡಿದ ಹೆಚ್ಚಿನ ಅನುದಾನಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ)

೧. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಸಣ್ಣ ಪ್ರಮಾಣದ ಕೈಗಾರಿಕೆಗಾಗಿ ಪುರಸ್ಕೃತ ಬಾಬಿನ ರಾಜಸ್ವ ಖಾತೆಯಲ್ಲಿ ಹೆಚ್ಚುವರಿಯನ್ನಾಗಿ ವಹಿಸಿದ ವೆಚ್ಚಗಳಲ್ಲಾದ ೩,೭೯,೫೬,೬೬೬ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡಲಾಯಿತು.

೨. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ರೇಷ್ಮೆಗಾಗಿ ಪುರಸ್ಕೃತ ಬಾಬಿನ ಬಂಡವಾಳ ಖಾತೆಯಲ್ಲಿ ಹೆಚ್ಚುವರಿಯಾಗಿ ವಹಿಸಿದ ವೆಚ್ಚಗಳಲ್ಲಿರುವ ೧೨,೧೪,೧೮೯ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು,

೩. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ನಿಗಮ, ನಗರಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಅನುದಾನಕ್ಕಾಗಿ ಪುರಸ್ಕೃತ ಬಾಬಿನ ರಾಜಸ್ವ ಖಾತೆಯಲ್ಲಿ ೧೦,೭೪,೭೮,೨೩೨ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು.

೪. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಸಣ್ಣ ನೀರಾವರಿಗಾಗಿ ಪುರಸ್ಕೃತ ಬಾಬಿನ ರಾಜಸ್ವ ಖಾತೆಯಲ್ಲಿ ೨,೬೨,೨೪,೨೦೭ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು.

೫. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಯೋಜನಾ ಇಲಾಖೆಯ ಅಭಿಯಾಜ್ಞೆಗಳಿಗಾಗಿ ಪುರಸ್ಕೃತ ಬಾಬಿನ ರಾಜಸ್ವ ಖಾತೆಯಲ್ಲಿ ಹೆಚ್ಚುವರಿಯಾಗಿ ವಹಿಸಿದ ವೆಚ್ಚವಾದ ೨೪,೪೦,೮೭೪ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು.

೬. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಲೋಕೋಪಯೋಗಿ ಕಾಮಗಾರಿಗಳಿಗಾಗಿ (ನಿರ್ವಹಣೆ ರಹಿತ) ಪುರಸ್ಕೃತ ಬಾಬಿನ ರಾಜಸ್ವ ಖಾತೆಯಲ್ಲಿ ಹೆಚ್ಚುವರಿಯಾಗಿ ವಹಿಸಿದ ವೆಚ್ಚವಾದ ೨೧,೦೫,೬೮,೭೫೮ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು.

೭. ೧೯೮೪ ೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ ಪುರಸ್ಕೃತ ಬಾಬಿನ ಬಂಡವಾಳ ಖಾತೆಯಲ್ಲಿ ಹೆಚ್ಚುವರಿಯಾಗಿ ವಹಿಸಿದ ವೆಚ್ಚವಾದ ೨೮,೦೩,೩೬,೯೬೩ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು,

೮. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಕ್ಕಾಗಿ ಪುರಸ್ಕೃತ ಬಾಬಿನ ಬಂಡವಾಳ ಖಾತೆಯಲ್ಲಿ ಹೆಚ್ಚುವರಿಯಾಗಿ ವಹಿಸಿದ ವೆಚ್ಚವಾದ ೧೧,೭೦,೭೮೮ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು.

೯. ೧೯೮೪-೮೫ನೆಯ ಆರ್ಥಿಕ ವರ್ಷಕ್ಕೆ ಸಂಬಂಧಪಟ್ಟಂತೆ ಆದಿವಾಸಿ ಉಪಯೋಜನೆಗಳಿಗಾಗಿ ಪುರಸ್ಕೃತ ಬಾಬಿನ ಬಂಡವಾಳ ಖಾತೆಯಲ್ಲಿ ಹೆಚ್ಚುವರಿಯಾಗಿ ವಹಿಸಿದ ವೆಚ್ಚವಾದ ೫೫,೭೫,೦೨೬ ರೂಗಳನ್ನು ಕ್ರಮಬದ್ಧಗೊಳಿಸಲು ಸರ್ಕಾರಕ್ಕೆ ಅನುಮತಿ ನೀಡುವುದು.''

೧೯೮೮-೮೯ನೇ ಸಾಲಿನ ಅನುಪೂರಕ ಅಂದಾಜುಗಳ (ಮೊದಲಿನ ಕಂತು) ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೧೯೮೮-೮೯ನೇ ಮಾರ್ಚ್ ೩೧ ರಂದು ಅಂತ್ಯಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ದೊರಕಲಿರುವ ಪೂರಕ ಅಂದಾಜುಗಳ ಸಂಖ್ಯೆ ೧,೬,೮,೯ ೧೫,೧೬, ೨೦,೨೪,೪೧,೪೩,೫೫,೫೬,೫೮, ಮತ್ತು ೬೩ ಇವುಗಳಿಗೆ ಸಂಬಂಧಿಸಿದಂತೆ ಸದರಿ ವೆಚ್ಚವನ್ನು ಸಂದಾಯ ಮಾಡಲು ಪೂರಕ ಅಂದಾಜುಗಳ ಪಟ್ಟಿಯಲ್ಲಿ ನಮೂದಿಸಿದ ಮೊತ್ತಕ್ಕೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪಿಸಲು ನಾನು ಅನುಮತಿಯನ್ನು ಕೋರುತ್ತೇನೆ

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಸ್ಕಾಲರ್‌ಶಿಪ್ಸ್ ಬಗ್ಗೆ ತಾವು ಹೇಳಲಿಲ್ಲ. ಇದರ ಬಗ್ಗೆ ತಾವು ಪುನಃ ಪುನಃ ಭರವಸೆಯನ್ನು ಕೊಡುತ್ತಿದ್ದೀರಿ. ಇನ್ನು ಕೂಡ ಈ ಕೆಲಸವನ್ನು ತಾವು ಮಾಡಲಿಲ್ಲ. ಇದಲ್ಲದೆ ಈಗಿನ ಬೆಲೆಗಳು ಸಹಿತ ಮೇಲಕ್ಕೆ ಏರುತ್ತಿವೆ.